بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 06

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 04–05

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

23, 30 ಜನವರಿ 2025, 23, 30 ಸುಲಹ್ 1403 ಹಿಜರಿ ಶಮ್‌ಸಿ,
22, 29 ರಜಬ್ 1445 ಹಿಜರಿ ಖಮರಿ.

### ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

### ಅಲ್ಲಾಹನ ಉಪದೇಶ

رَبَّنَآ اِنَّكَ مَنْ تُدْخِلِ النَّارَ فَقَدْ اَخْزَيْتَهٗ ۭ وَمَا لِلظّٰلِمِيْنَ مِنْ اَنْصَارٍ ۝ (آل عمران:193)

**(ಆಲಿ ಇಮ್ರಾನ್: 193)**

**ಅಂದರೆ: "ನಮ್ಮ ಪ್ರಭೂ, ನೀನು ಯಾರನ್ನಾದರೂ ನರಕದಲ್ಲಿ ಪ್ರವೇಶಿಸುವಂತೆ ಮಾಡಿದರೆ, ಅವನನ್ನು ನೀನು ಖಂಡಿತವಾಗಿಯೂ ನಿಂದ್ಯಗೊಳಿಸಿದೆ. ದುಷ್ಕರ್ಮಿಗಳಿಗೆ ಯಾರೂ ಸಹಾಯಕನಿಲ್ಲ.**

# ಅಹ್ಮದಿಯಾ ಜಮಾಅತಿನ ಕೇಂದ್ರ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ 129ನೇ ಜಲ್ಸ ಸಾಲಾನ (ವಾರ್ಷಿಕ ಸಮ್ಮೇಳನ) ಅನುಗ್ರಹಪೂರ್ಣವಾದ ಯಶಸ್ವಿ ಆಯೋಜನೆ.

ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್‌ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ(ಸ).

**(ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು)**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಾನು ವಾಗ್ದತ್ತ ಮಸೀಹ್ ಮತ್ತು ವಾಗ್ದತ್ತ ಮಹದಿ ಎಂದು ವಾದ ಮಂಡಿಸಿದ್ದಾರೆ. ಅವರ ಆಗಮನವನ್ನು ಅಹಝ್‌ರತ್ ಪೈಗಂಬರ್(ಸ) ಅವರು ಭವಿಷ್ಯ ನುಡಿದಿದ್ದರು ಮತ್ತು ಈಗ ಆಕಾಶದಿಂದ ಯಾವುದೇ ಮಸೀಹ್ ಅಥವಾ ಮಹದಿ ಆಗಮಿಸುವುದಿಲ್ಲ.

ಹಝ್‌ರತ್ ಪೈಗಂಬರ್(ಸ) ರು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಚಿಹ್ನೆಗಳಾಗಿ ನೀಡಿದ್ದ ಎಲ್ಲಾ ಭವಿಷ್ಯವಾಣಿಗಳು ನೆರವೇರಿದವು. ಅವರು ಜಗತ್ತನ್ನು, ವಿಶೇಷವಾಗಿ ಮುಸ್ಲಿಮರನ್ನು ಆಹ್ವಾನಿಸಿದರು ಹಝ್‌ರತ್ ಪೈಗಂಬರ್(ಸ) ರವರ ಭವಿಷ್ಯವಾಣಿಗಳನ್ನು ನೋಡಿ, ಅವುಗಳ ಬಗ್ಗೆ ಚಿಂತಿಸಿ ಮತ್ತು ಇದರಲ್ಲಿ ಘನತೆಯಿದೆ ಎಂದು ಅರ್ಥಮಾಡಿಕೊಳ್ಳಿ, ಸರ್ವಶಕ್ತನಾದ ಅಲ್ಲಾಹನ ಮತ್ತು ಅವನ ಸಂದೇಶವಾಹಕರ(ಸ) ಆಜ್ಞೆಗಳನ್ನು ಪಾಲಿಸುವುದು ಇದೆ.

ಖಾದಿಯಾನ್‌ನಲ್ಲಿ ನಡೆದ ಜಲ್ಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬರನ್ನು ಸರ್ವಶಕ್ತನಾದ ಅಲ್ಲಾಹನು ಸಂರಕ್ಷಿಸಲಿ ಮತ್ತು ಇಸ್ಲಾಂನ ಬೋಧನೆಗಳನ್ನು ನಿಜವಾಗಿಯೂ ಅನುಸರಿಸಲು ಅವರಿಗೆ ಸಹಾಯ ಮಾಡಲಿ. ಮತ್ತು ಹಝ್‌ರತ್ ಪೈಗಂಬರ್(ಸ) ರವರ ಮೇಲಿನ ನಮ್ಮ ಪ್ರೀತಿ ಮತ್ತು ವಾತ್ಸಲ್ಯವನ್ನು ವ್ಯಕ್ತಪಡಿಸಲು ಮತ್ತು ನಮ್ಮ ಬೈಅತ್‌ನ ಹಕ್ಕನ್ನು ಈಡೇರಿಸಲು ಅವನು ನಮಗೆ ಸಾಮರ್ಥ್ಯವನ್ನು ನೀಡಲಿ.

## MTA International ಮೂಲಕ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ(ಅಬಿಅ) ರ ಇಸ್ಲಾಮಾಬಾದ್, ಯು.ಕೆ ಯಿಂದ ಜಲ್ಸದಲ್ಲಿ ಉಪಸ್ಥಿತರಿದ್ದವರೊಂದಿಗೆ ಸಂಬೋಧಿಸಿ ಮಾತನಾಡಿರುವ ಸಮಾರೋಪ ಸಮಾರಂಭ.

* 129ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2024 ರಂದು ಆಯೋಜಿಸಲಾಗಿತ್ತು * ಮೂರು ದಿವಸವೂ ಜಲ್ಸಾದ ಕಾರ್ಯಕ್ರಮಗಳನ್ನು ಲೈವ್ ಸ್ಟ್ರೀಮಿಂಗ್ ಮೂಲಕ ದೇಶಿಯರು ಹಾಗೂ ವಿದೇಶಿಯರು ವೀಕ್ಷಿಸಿದರು * ಲೈವ್ ಸ್ಟ್ರೀಮಿಂಗ್ ಮೂಲಕ ಅರವತ್ತ ಮೂರು ಸಾವಿರದ ಆರು ನೂರ ಅರವತ್ತಾರು ಜನರು ಜಲ್ಸಾದ ನಡಾವಳಿಗಳನ್ನು ವೀಕ್ಷಿಸಿದರು ಮತ್ತು ಆಲಿಸಿದರು * ಜಲ್ಸಾದಲ್ಲಿ ಹದಿನಾರು ಸಾವಿರಕ್ಕೂ ಹೆಚ್ಚು ಅಹ್ಮದಿಯತ್ತಿನ ಪ್ರೇಮಿಗಳು ಸೇರಿದ್ದರು * 42 ದೇಶಗಳ ವಿವಿಧ ಗೋತ್ರಗಳ ಸ್ನೇಹಿತರು ಭಾಗವಹಿಸಿದ್ದರು * **ಸಯ್ಯಿದುನಾ ಹಝ್‌ರತ್ ಖಲೀಫತುಲ್ ಮಸೀಹ್ ಖಮಿಸ್(ಅತಬಿಅ) ಅವರ ವಿಶ್ವಾಸವರ್ಧಕ ಸಮಾರೋಪ ಭಾಷಣ mta ಇಂಟರ್ನ್ಯಾಷನಲ್ ಮೂಲಕ ನೇರ ಪ್ರಸಾರ** * ಸಮಾರೋಪ ಸಮಾರಂಭದಲ್ಲಿ ಇಸ್ಲಾಮಾಬಾದ್ ಯುಕೆ ನಲ್ಲಿ ಜಮಾಅತ್ತಿನ ಸದಸ್ಯರ ಒಗ್ಗೂಡುವಿಕೆ * ಕೆಲವು ಆಫ್ರಿಕನ್ ದೇಶಗಳ ಜಲ್ಸಗಳು ಮತ್ತು ಅವರ ಸಮಾರೋಪ ಸಮಾರಂಭದಲ್ಲಿ ಅವರ ಭಾಗವಹಿಸುವಿಕೆ * ತಹಜ್ಜುದ್ ನಮಾಝ್ * ಪವಿತ್ರ ಖುರ್‌ಆನ್ ಬೋಧನೆ ಮತ್ತು ದೈವಿಕ ಸ್ಮರಣೆಯಿಂದ ತುಂಬಿದ ವಾತಾವರಣ * ವಿದ್ವಾಂಸರ ಚಿಂತನಶೀಲ ಭಾಷಣಗಳು * 9 ಭಾಷೆಗಳಲ್ಲಿ ಕಾರ್ಯಕ್ರಮಗಳ ನೇರ ಅನುವಾದ. ಜಮಾಅತ್‌ನ ಸದಸ್ಯರ ಜ್ಞಾನವನ್ನು ಹೆಚ್ಚಿಸಲು ತರಬೇತಿ ವಿಷಯಗಳನ್ನು ಒಳಗೊಂಡಿರುವ ಸಾಕ್ಷ್ಯಚಿತ್ರಗಳು ಮತ್ತು ವಿವಿಧ ಮಾಹಿತಿ ಪ್ರದರ್ಶನಗಳ ಆಯೋಜನೆ * ನಿಕಾಹ್‌ಗಳ ಘೋಷಣೆ * ಪತ್ರಿಕ ಮಾಧ್ಯಮಗಳಲ್ಲಿ ಜಲ್ಸಾದ ನೇರ ಪ್ರಸಾರ * ಶಾಂತಿದಾಯಕ ಹಾಗೂ ಆನಂದಮಯ ವಾತಾವರಣದಲ್ಲಿ ಜಲ್ಸದ ಎಲ್ಲಾ ಕಾರ್ಯಕ್ರಮಗಳ ಆಯೋಜನೆ.

**(ಭಾಗ–2)**

**ಶನಿವಾರ, ಡಿಸೆಂಬರ್ 28, 2024**

**ಎರಡನೇ ದಿನದಂದು ಮೊದಲ ಅಧಿವೇಶನ**

ಈ ಅಧಿವೇಶನವು ಮಜ್ಲಿಸ್ ಕಾರ್ಪರ್ದಾಝ್ ಬಹಿಶ್ತಿ ಮಕ್ಬರಾ ಖಾದಿಯಾನ್‌ನ ಕಾರ್ಯದರ್ಶಿಯಾದ ಗೌರವಾನ್ವಿತ ಮುನೀರ್ ಅಹ್ಮದ್ ಸಾಹಿಬ್ ಹಾಫಿಝಾಬಾದಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಪವಿತ್ರ ಖುರ್‌ಆನ್ ಪಠಣವನ್ನು ಜಾಮಿಯಾ ಅಹ್ಮದಿಯಾ ಖಾದಿಯಾನ್‌ನ ವಿದ್ಯಾರ್ಥಿಯಾದ ಮಾನ್ಯ ಶೇಖ್ ಮುಹಮ್ಮದ್ ಯಾಹ್ಯಾ ಸಾಹಿಬ್ ಅವರು ಮಾಡಿದರು ಮತ್ತು ಅನುವಾದವನ್ನು ಮಾನ್ಯ ಮೌಲವಿ ಅಬ್ದುಲ್ ವಕೀಲ್ ನಿಯಾಝ್ ಸಾಹಿಬ್ ನಾಯಿಬ್ ನಾಝಿರ್ ಇಸ್ಲಾಹ್ ವ ಇರ್ಷಾದ್ ದಕ್ಷಿಣ ಭಾರತ ಖಾದಿಯಾನ್ ಅವರು ಪ್ರಸ್ತುತಪಡಿಸಿದರು. ತದನಂತರ,

*(ಪುಟ–07ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಹುದೈಬಿಯಾ ಸಂಧಿಯ ಅನುಗ್ರಹೀತ ಫಲಗಳಲ್ಲಿ ಒಂದೇನೆಂದರೆ, ಜನರಿಗೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಲು ಅವಕಾಶ ಲಭಿಸಿತು. ಅವರು ಹಝ್ರತ್ ಪೈಗಂಬರ್(ಸ)ರ ಮಾತನ್ನು ಆಲಿಸಿದಾಗ ಅವರಲ್ಲಿ ನೂರಾರು ಜನರು ಮುಸ್ಲಿಮರಾದರು. ಎಲ್ಲಿಯವರೆಗೆ ಅವರು ಹಝ್ರತ್ ಪೈಗಂಬರ್(ಸ)ರ ಮಾತುಗಳನ್ನು ಕೇಳಲಿಲ್ಲವೋ ಅಲ್ಲಿಯವರೆಗೆ, ಅವರ ಮತ್ತು ಹಝ್ರತ್ ಪೈಗಂಬರ್(ಸ)ರ ನಡುವೆ ಗೋಡೆಯಿತ್ತು, ಅದು ಅವರಿಗೆ ಸೌಂದರ್ಯದ ಬಗ್ಗೆ ತಿಳಿಸಲು ಅವಕಾಶ ನೀಡುತ್ತಿರಲಿಲ್ಲ. (ಹಝ್ರತ್ ಮಸೀಹ್ ಮೌಊದ್(ಅ))

---

ಹಝ್ರತ್ ಪೈಗಂಬರ್(ಸ)ರು ತಮ್ಮ ಧ್ವನಿಯನ್ನು ಹೆಚ್ಚಿಸಿ ಹೇಳಿದರು:
ಓ ಅಬು ಜಂದಲ್! ತಾಳ್ಮೆಯಿಂದಿರಿ ಮತ್ತು ಪ್ರತಿಫಲವನ್ನು ನಿರೀಕ್ಷಿಸಿ. ಖಂಡಿತವಾಗಿಯೂ ಅಲ್ಲಾಹನು ನಿಮಗಾಗಿ ಮತ್ತು ನಿಮ್ಮ ದುರ್ಬಲ ಸಹಚರರಿಗೆ ಮೋಕ್ಷದ ಮಾರ್ಗವನ್ನು ಸೃಷ್ಟಿಸುತ್ತಾನೆ. ನಾವು ರಾಷ್ಟ್ರದೊಂದಿಗೆ ಸಂಧಿಯ ಒಪ್ಪಂದವನ್ನು ಮಾಡಿದ್ದೇವೆ ಮತ್ತು ನಾವು ಅವರಿಗೆ ಒಪ್ಪಂದವನ್ನು ನೀಡಿದ್ದೇವೆ ಮತ್ತು ಅವರು ನಮಗೆ ಒಪ್ಪಂದವನ್ನು ನೀಡಿದ್ದಾರೆ ಮತ್ತು ನಾವು ಮೋಸ ಮಾಡುವುದಿಲ್ಲ.

---

ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು:
ನಾನು ನಿಮಗೆ ಬಹಳಷ್ಟು ಆದೇಶಗಳನ್ನು ನೀಡಿದ್ದೇನೆ. ಆದರೆ ನಿಮ್ಮಲ್ಲಿ ಅತ್ಯಂತ ನಿಷ್ಠಾವಂತರಲ್ಲೂ ಕೆಲವೊಮ್ಮೆ ಅದನ್ನು ವಿರೋಧಿಸುವ ಗುಣವನ್ನು ನಾನು ಕಂಡಿದ್ದೇನೆ. ಆದರೆ ಅಬೂಬಕರ್(ರ)ರಲ್ಲಿ ನಾನು ಈ ಸ್ವಭಾವವನ್ನು ಎಂದಿಗೂ ಕಂಡಿಲ್ಲ."

## ಹುದೈಬಿಯಾ ಯುದ್ಧದ ಸಂದರ್ಭಗಳು ಮತ್ತು ಘಟನೆಗಳ ವಿವರಾತ್ಮಕ ಪ್ರಸ್ತಾವನೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **29-11-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹುದೈಬಿಯಾ ಸಂಧಿಗೆ ಸಂಬಂಧಿಸಿ ಪ್ರಸ್ತಾಪಿಸಲಾಗುತ್ತಿತ್ತು. ಅದರ ಇನ್ನಷ್ಟು ವಿವರಣೆ ನೀಡುತ್ತೇನೆ. ಈ ಸಂದರ್ಭದಲ್ಲಿ ಸಹಾಬಿಯರಿಗೆ ಕಾವಲುಗಾರಿಕೆಯ ಡ್ಯೂಟಿಯನ್ನು ವಹಿಸಿ ಕೊಡಲಾಗಿತ್ತು. ರಾತ್ರಿ ಸಮಯದಲ್ಲಿ ಕಾವಲು ನೀಡಲು ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ಆದೇಶ ನೀಡಿದ್ದರು ಎಂದು ಈ ಕುರಿತು ಪ್ರಸ್ತಾಪಿಸಲಾಗಿದೆ. ದಿನಾಲೂ ಮೂರು ವ್ಯಕ್ತಿಗಳು ಸರದಿಯಂತೆ ಕಾವಲು ಕೊಡುತ್ತಿದ್ದರು. ಅವರಲ್ಲಿ ಹಝ್ರತ್ ಔಸ್ ಬಿನ್ ಖೌಲಿ(ರ), ಅಬ್ಬಾದ್ ಬಿನ್ ಬಿಶ್ರ್(ರ) ಮತ್ತು ಮುಹಮ್ಮದ್ ಬಿನ್ ಮಸ್ಲಮ(ರ) ಇದ್ದರು. ಒಂದು ರಾತ್ರಿ, ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ) ಅವರು ಹಝ್ರತ್ ಪೈಗಂಬರ್(ಸ)ರ ಕಾವಲು ಕರ್ತವ್ಯದಲ್ಲಿದ್ದರು, ಖುರೈಶೀಯರು ಮಿಕ್ರಝ್ ಬಿನ್ ಹಫ್ಸ್ ಅವರ ನೇತೃತ್ವದಲ್ಲಿ ಐವತ್ತು ಜನರನ್ನು ಕಳುಹಿಸಿದರು ಮತ್ತು ಮುಸ್ಲಿಮರಲ್ಲಿ ಯಾರನ್ನಾದರು ಕೊಲ್ಲಬಹುದು ಅಥವಾ ಅವರಿಗೆ ಹಾನಿವುಂಟು ಮಾಡಬಹುದು ಎಂದು ಆಶಿಸಿ ಅವರನ್ನು ಹಝ್ರತ್ ಪೈಗಂಬರ್(ಸ) ಅವರ ಸುತ್ತಲೂ ಸುತ್ತುವಂತೆ ಆದೇಶಿಸಿದರು. ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ) ಅವರನ್ನು ಹಿಡಿದು ಹಝ್ರತ್ ಪೈಗಂಬರ್(ಸ) ರ ಬಳಿಗೆ ಕರೆತಂದರು. ಮಿಕ್ರಝ್ ಅಲ್ಲಿಂದ ಓಡಿಹೋಗಿ ತನ್ನ ಸಂಗಡಿಗರಿಗೆ ಇದರ ಬಗ್ಗೆ ಎಚ್ಚರಿಕೆ ನೀಡಿದನು. ಮಿಕ್ರಝ್ ಒಬ್ಬ ಮೋಸಗಾರ ಎಂದು ಕೊನೆಯ ಖುತ್‌ಬ ಜುಮುಅದಲ್ಲಿ ಉಲ್ಲೇಖಿಸಲಾದ ಹಝ್ರತ್ ಪೈಗಂಬರ್(ಸ) ಅವರ ಹೇಳಿಕೆಯನ್ನು ಸಹ ಇದು ಬಹಿರಂಗಪಡಿಸಿತು. ಕುರ್ಝ್ ಬಿನ್ ಜಾಬಿರ್ ಫಿಹ್ರಿ, ಅಬ್ದುಲ್ಲಾ ಬಿನ್ ಸುಹೈಲ್, ಅಬ್ದುಲ್ಲಾ ಬಿನ್ ಹುದಾಫ ಸಾಹ್ಮಿ, ಅಬುರೂಮ್ ಬಿನ್ ಉಮೈರ್ ಅಬ್ದರಿ, ಅಯ್ಯಾಶ್ ಬಿನ್ ಅಬಿ ರಬೀಅ, ಹಿಶಾಮ್ ಬಿನ್ ಆಸ್, ಅಬೂ ಹಾತಿಬ್ ಬಿನ್ ಅಮ್ರೊ, ಉಮೈರ್ ಬಿನ್ ವಹಬ್, ಹಾತಿಬ್ ಬಿನ್ ಅಬೀ ಬಲ್‌ತ ಮತ್ತು ಅಬ್ದುಲ್ಲಾ ಬಿನ್ ಉಮೈಯಾ ಸೇರಿದಂತೆ ಮುಸ್ಲಿಮರಲ್ಲಿ ಕೆಲವರು ರಸೂಲುಲ್ಲಾಹ್(ಸ)ರ ಅನುಮತಿಯೊಂದಿಗೆ ಮಕ್ಕಾಗೆ ಪ್ರವೇಶಿಸಿದ್ದರು ಎಂದೂ ಪ್ರಸ್ತಾಪಿಸಲಾಗಿದೆ. ಅವರು ಹಝ್ರತ್ ಉಸ್ಮಾನ್(ರ)ರ ಅಭಯದಲ್ಲಿ ಮಕ್ಕದಲ್ಲಿ ಪ್ರವೇಶಿಸಿದ್ದರು ಎಂದೂ ರಹಸ್ಯವಾಗಿ ಪ್ರವೇಶಿಸಿದ್ದರು ಎಂದೂ ಪ್ರಸ್ತಾಪಗಳು ಇವೆ. ವಿಭಿನ್ನ ವರದಿಗಳಿವೆ.

ಈ ಮುಸ್ಲಿಮರ ಬಗ್ಗೆ ಖುರೈಶಿಯರಿಗೆ ಗೊತ್ತಾದಾಗ ಖುರೈಶಿಯರು ಅವರನ್ನು ಹಿಡಿದರು. ತಮ್ಮ ಸಂಗಡಿಗರನ್ನು ಹಝ್ರತ್ ಮುಹಮ್ಮದ್ ಬಿನ್ ಮಸ್ಲಮ(ರ) ತಡೆದು ಬಂಧಿಸಿದ ಸುದ್ದಿಯೂ ಖುರೈಶಿಯರಿಗೆ ಲಭಿಸಿತ್ತು. ಖುರೈಶಿಯರ ಮತ್ತೊಂದು ಆಯುಧಧಾರಿ ಸಂಘ ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಗಳ ಮೇಲೆ ದಾಳಿ ನಡೆಸಿತ್ತು. ಅವರು ಬಾಣಗಳನ್ನು ಮತ್ತು ಕಲ್ಲುಗಳನ್ನು ಎಸೆಯಲು ತೊಡಗಿದ್ದರು.

ಆಗ ಮುಶ್ರಿಕರ ಹನ್ನೆರಡು ಕುದುರೆಸವಾರರನ್ನು ಮುಸ್ಲಿಮರು ಬಂಧಿಸಿದ್ದರು. ಮುಸ್ಲಿಮರಲ್ಲಿ ಹಝ್ರತ್ ಇಬ್ನು ಝುನೈಮ್(ರ) ಶಹೀದ್ ಆದರು. ಅವರನ್ನು ಖುರೈಶಿಯರು ಬಾಣ ಎಸೆದು ವಧಿಸಿದ್ದರು.

ಅನಂತರ ಖುರೈಶಿಯರು ಒಂದು ಸಂಘವನ್ನು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕಳುಹಿಸಿದರು. ಅವರಲ್ಲಿ ಸುಹೈಲ್ ಬಿನ್ ಅಮ್ರ್ ಸಹ ಇದ್ದರು. ಅವರನ್ನು ದೂರದಿಂದ ನೋಡುತ್ತಲೇ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೀಗೆ ಹೇಳಿದರು: ಸುಹೈಲ್‌ನ ಮೂಲಕ ನಿಮ್ಮ ಕಾರ್ಯ ಸುಲಭವಾಗುವುದು.

ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಹೇಳಿದರು: ನಿಮ್ಮ ಸ್ನೇಹಿತರಾದ ಹಝ್ರತ್ ಉಸ್ಮಾನ್(ರ) ಮತ್ತು ಇತರ ಹತ್ತು ಸಹಾಬಿಯರನ್ನು ಬಂಧಿಸಿದ ಮತ್ತು ನಮ್ಮ ಕೆಲವು ಜನರು ನಿಮ್ಮೊಂದಿಗೆ ಸಂಘರ್ಷ ನಡೆಸಿದ ವಿಷಯದಲ್ಲಿ ನಮ್ಮ ಪ್ರಧಾನ ಸಲಹೆಗಾರರು ಭಾಗೀದಾರರಲ್ಲ. ನಮಗೆ ಈ ವಿಷಯದ ಬಗ್ಗೆ ಗೊತ್ತಾದಾಗ ನಮಗೆ ಅದನ್ನು ಸಹಿಸಲಾಗಲಿಲ್ಲ. ನಮಗೆ ಈ ಕುರಿತು ಏನೂ ಗೊತ್ತಿಲ್ಲ. ಅದು ನಮ್ಮ ನಡುವೆ ಇರುವ ಕೆಲವು ಕಿಡಿಗೇಡಿಗಳ ಕೆಲಸವಾಗಿತ್ತು. ಆದ್ದರಿಂದ ನೀವು ಎರಡು ಬಾರಿ ಹಿಡಿದ ನಮ್ಮ ಜನರನ್ನು ನಮಗೆ ಮರಳಿಸಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು:

ನಮ್ಮ ಸ್ನೇಹಿತರನ್ನು ಬಿಡುವ ತನಕ ನಾವು ಅವರನ್ನು ಬಿಡಲಾರೆವು. ಸರಿ ನಾವು ಬಿಟ್ಟು ಕೊಡುತ್ತೇವೆ ಎಂದು ಆಗ ಅವರೆಲ್ಲರೂ ಹೇಳಿದರು. ಹೀಗೆ ಖುರೈಶಿಯರು ಹಝ್ರತ್ ಉಸ್ಮಾನ್(ರ) ಮತ್ತು ಇತರ ಹತ್ತು ಸಹಾಬಿಯರನ್ನು ಮರಳಿಸಿದರು. ಆಗ ಹಝ್ರತ್ ಪೈಗಂಬರ್(ಸ) ಸಹ ಅವರ ಜನರನ್ನು ಬಿಟ್ಟು ಕೊಟ್ಟರು. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-5, ಪುಟ-48, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಪ್ರಸ್ತಾಪಿಸಲಾದಂತೆ ಹಝ್ರತ್ ಉಸ್ಮಾನ್(ರ)ರನ್ನು ಸತ್ಯನಿಷೇಧಿಗಳು ಹಿಡಿದಿದ್ದರು. ಈ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿದಾಗ ಅವರು ಸಹಾಬಿಯರಿಂದ ಬೈಅತೇ ರಿಝ್ವಾನ್ ಎಂದು ಕರೆಯಲ್ಪಡುವ ಒಂದು ಪ್ರತಿಜ್ಞೆಯನ್ನು ಪಡೆದಿದ್ದರು. ಹುದೈಬಿಯಾದಲ್ಲಿ ಪಡೆಯಲಾದ

ಈ ಬೈಅತ್ತಿನ ಬಗ್ಗೆ ಖುರೈಶಿಯರಿಗೆ ಗೊತ್ತಾದಾಗ ಅವರು ಬಹಳ ಭಯಗೊಂಡರು. ಸಂಧಾನ ಮಾಡುವುದೇ ಲೇಸು ಎಂದು ಅವರಲ್ಲಿ ವಿವೇಕವಂತರು ಸಲಹೆ ನೀಡಿದರು. ಯಾವ ರೀತಿಯ ಸಂಧಾನವೆಂದರೆ, ನೀವು ಈ ವರ್ಷ ಮರಳಿ ಹೋಗಿರಿ. ಮುಂದಿನ ವರ್ಷ ಬಂದು ಮೂರು ದಿನಗಳು ಮಕ್ಕದಲ್ಲಿ ತಂಗಬಹುದು, ಆದರೆ ನಿಮ್ಮ ಬಳಿ ಸವಾರರಿಗೆ ಅಗತ್ಯವಾದ ಪ್ರಧಾನ ಆಯುಧ ಮಾತ್ರ ಇರತಕ್ಕದು. ಎಂದರೆ ಕವಚದಲ್ಲಿ ಇರಿಸಲಾಗುವ ಖಡ್ಗ ಮತ್ತು ಬಿಲ್ಲು ಬಾಣಗಳನ್ನು ಮಾತ್ರ ಜೊತೆಗೆ ಇರಿಸಬಹುದಾಗಿದೆ. ಈ ಸಲಹೆಯ ನಂತರ, ಖುರೈಶಿಗಳು ಸುಹೇಲ್ ಬಿನ್ ಅಮ್ರ್ ಅವರನ್ನು ಎರಡನೇ ಬಾರಿಗೆ ಕಳುಹಿಸಿದರು. ಅವರ ಜೊತೆಯಲ್ಲಿ ಮಿಕ್ರಿಝ್ ಬಿನ್ ಹಫ್ಸ್ ಮತ್ತು ಹುವೈತ್ ಬಿನ್ ಅಬ್ದುಲ್ ಉಝಿ ಇದ್ದರು. ಈ ಜನರು ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಬಂದರು, ಈ ವರ್ಷ ನೀವು ಉಮ್ರಾ ಮಾಡದೆ ಹಿಂತಿರುಗಬೇಕೆಂದು ಸೂಚಿಸಿದರು, ಆದ್ದರಿಂದ ನೀವು(ಸ) ಖುರೈಷಿಗಳ ಇಚ್ಛೆಗೆ ವಿರುದ್ಧವಾಗಿ ಮಕ್ಕಾವನ್ನು ಪ್ರವೇಶಿಸಿದ್ದಾರೆಂದು ಅರಬ್ಬರು ಹೇಳಬಾರದು ಮತ್ತೆ ಮುಂದಿನ ವರ್ಷ ಉಮ್ರಾಗಾಗಿ ಬರಬೇಕು. ಹೀಗೆ ಸುಹೈಲ್ ಮುಂದೆ ಬಂದಾಗ, ಹಝ್ರತ್ ಪೈಂಬರ್(ಸ)ರು ಅವರನ್ನು ದೂರದಿಂದ ನೋಡಿ ಹೇಳಿದರು:

ಈ ವ್ಯಕ್ತಿಯನ್ನು ಮತ್ತೆ ಕಳುಹಿಸುವುದು ಎಂದರೆ ಖುರೈಶಿಗಳು ಸಂಧಿ ಮಾಡಿಕೊಳ್ಳುವ ಉದ್ದೇಶ ಹೊಂದಿದ್ದಾರೆ.

(ಸೀರತ್ ಅಲ್-ಹಲ್ಬಿಯಾಹ್, ಸಂಪುಟ-3, ಪುಟ-27, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹುದೈಬಿಯಾ ಸಂಧಿಯ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೀಗೆ ಬರೆದಿರುವರು: "ಸುಹೇಲ್ ಬಿನ್ ಅಮ್ರ್ ಹಝ್ರತ್ ಪೈಗಂಬರ್(ಸ)ರ ಮುಂದೆ ಬಂದಾಗ, ಅವರನ್ನು ನೋಡಿದ ನಂತರ, ಹುಝೂರ್(ಸ) ಹೇಳಿದರು: ಇದು ಸುಹೇಲ್ ಬಂದಿರುವರು. ಈಗ ಅಲ್ಲಾಹನು ಬಯಸಿದರೆ ನಿಮ್ಮ ಕಾರ್ಯವು ಸುಲಭವಾಗುತ್ತದೆ. "ಆದಾಗ್ಯೂ, ಸುಹೈಲ್ ಬಂದರು ಮತ್ತು ಬಂದ ಕೂಡಲೇ ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: ಬನ್ನಿರಿ, ದೀರ್ಘವಾದ ಚರ್ಚೆಗಳನ್ನು ಬಿಟ್ಟುಬಿಡೋಣ. ನಾವು ಒಪ್ಪಂದಕ್ಕೆ ತಯಾರಿದ್ದೇವೆ. ಹಝ್ರತ್ ಪೈಗಂಬರ್(ಸ) ನಾವು ಸಹ ತಯಾರಿದ್ದೇವೆ ಎಂದು ಹೇಳಿದರು. ಹೀಗೆ ಹೇಳುತ್ತಾ ಹಝ್ರತ್ ಪೈಗಂಬರ್(ಸ) ತನ್ನ ಕಾರ್ಯದರ್ಶಿಯಾದ ಹಝ್ರತ್ ಅಲಿ(ರ)ರನ್ನು ಕರೆದರು. ನಿಬಂಧನೆಗಳ ಬಗ್ಗೆ ಸಾಮಾನ್ಯವಾದ ರೀತಿಯಲ್ಲಿ ಒಂದು ಚರ್ಚೆ ನಡೆದಾಗಿತ್ತು. ವಿಶದೀಕರಣದೊಂದಿಗೆ ತೀರ್ಮಾನಿಸಬೇಕಾಗಿತ್ತು. ಆದ್ದರಿಂದ ಹಝ್ರತ್ ಅಲಿ(ರ) ಬಂದ ಕೂಡಲೇ ಬರೆಯಿರಿ ಎಂದು ಅವರೊಡನೆ ಹೇಳಿದರು. ಅವರು **ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್** ಎಂದು ಪ್ರಾರಂಭಿಸಿ ಬರೆಯ ತೊಡಗಿದರು. ಸುಹೈಲ್ ಸಂಧಾನಕ್ಕೆ ತಯಾರಾಗಿದ್ದರು. ಆದರೆ ಖುರೈಶಿಯರ ಹಕ್ಕುಗಳ ಸಂರಕ್ಷಣೆ ಮತ್ತು ಮಕ್ಕಾ ನಿವಾಸಿಗಳ ಗೌರವದ ಬಗ್ಗೆಯೂ ಬಹಳ ಜಾಗರೂಕತೆ ವಹಿಸುತ್ತಿದ್ದರು. ಆದ್ದರಿಂದ ಅರೇಬಿಯರ ರೂಢಿಗತ ರೀತಿಯ ಪ್ರಕಾರ **ಬಿಸ್ಮಿಕ ಅಲ್ಲಾಹುಮ್ಮ** ಎಂದು ಬರೆಯಲು ಒತ್ತಾಯಪಡಿಸಿದರು. ಮತ್ತೊಂದೆಡೆ ಮುಸ್ಲಿಮರಿಗೂ ಸಾಮುದಾಯಿಕ ಗೌರವ ಮತ್ತು ಧಾರ್ಮಿಕ ಅಭಿಮಾನದ ಪ್ರಶ್ನೆ ಇತ್ತು. ಅವರು ಕೂಡ ಈ ಬದಲಾವಣೆಯಿಂದ ಆಘಾತಗೊಂಡರು ಮತ್ತು **ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ** ಎಂದೇ ಬರೆಯಲು ಹೇಳಿದರು. ಆದರೆ 'ಅದರಲ್ಲಿ ಏನೂ ತಪ್ಪಿಲ್ಲ, ಸುಹೈಲ್ ಹೇಳುತ್ತಿರುವ ಹಾಗೆಯೇ ಬರೆಯಿರಿ' ಎಂದು ಹೇಳಿ ಹಝ್ರತ್ ಪೈಗಂಬರ್(ಸ) ಮುಸ್ಲಿಮರನ್ನು ಸಮಾಧಾನಪಡಿಸಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಈ ಒಪ್ಪಂದವನ್ನು ಮುಹಮ್ಮದ್ ರಸೂಲುಲ್ಲಾಹ್(ಸ) ಮಾಡಿರುವರು. ಸುಹೈಲ್ ಪುನಃ ತಡೆದು, ರಸೂಲುಲ್ಲಾಹ್ ಎಂಬ ಪದ ನಾವು ಒಪ್ಪಲಾರೆವು ಎಂದು ಹೇಳಿದರು. ಒಂದುವೇಳೆ ನೀವು ರಸೂಲುಲ್ಲಾಹ್ ಎಂದು ಒಪ್ಪಿಕೊಂಡರೆ ನಮ್ಮ ಮತ್ತು ನಿಮ್ಮ ನಡುವೆ ಯಾವುದೇ ಜಗಳವೇ ಇರುವುದಿಲ್ಲ ಹೀಗೆ ನಾವು ನಿಮ್ಮನ್ನು ತಡೆಯುಲು ಅಥವಾ ನಿಮ್ಮೊಂದಿಗೆ ಹೋರಾಡಲು ಯಾವುದೇ ಅಧಿಕಾರವಿರುವುದಿಲ್ಲ. ಆದ್ದರಿಂದ ನಮ್ಮಲ್ಲಿ ರೂಢಿ ಇರುವಂತೆ ಕೇವಲ ಮುಹಮ್ಮದ್ ಬಿನ್ ಅಬ್ದುಲ್ಲಾ ಎಂದು ಒಪ್ಪಂದ ಬರೆಸಿರಿ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ನಂಬಿದರೂ ನಂಬದಿದ್ದರೂ ನಾನು ಅಲ್ಲಾಹನ ರಸೂಲ್ ಆಗಿದ್ದೇನೆ. ಆದರೆ ನಾನು ಮುಹಮ್ಮದ್ ಬಿನ್ ಅಬ್ದುಲ್ಲಾಹ್ ಸಹ ಆಗಿರುವೆನು. ಆದ್ದರಿಂದ ಹಾಗೆಯೇ ಬರೆಯಿರಿ. ಹಝ್ರತ್ ಪೈಗಂಬರ್(ಸ)ರಿಗಾಗಿ ಬರೆಯುತ್ತಿದ್ದ ಹಝ್ರತ್ ಅಲಿ(ರ)ರ ಧಾರ್ಮಿಕ ಅಭಿಮಾನದ ಬಗ್ಗೆಯೂ ಪ್ರಸ್ತಾಪವಿದೆ. ಹಝ್ರತ್ ಪೈಗಂಬರ್(ಸ)ರ ಹೆಸರಿನ ಮುಂದೆ ಇರುವ ರಸೂಲುಲ್ಲಾಹ್ ಎಂಬ ಪದವನ್ನು ಅಳಿಸಲು ಹಝ್ರತ್ ಅಲಿ(ರ)ರಿಗೆ ಮನಸ್ಸು ಬರಲಿಲ್ಲ. ಆಗ ಸ್ವತಃ ಹಝ್ರತ್ ಪೈಗಂಬರ್(ಸ) ಅದನ್ನು ಅಳಿಸಿದರು."

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಎಂ.ಎ, ಪುಟ 764-765)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಈ ವಿಷಯವನ್ನು ತಮ್ಮ ಪುಸ್ತಕದಲ್ಲಿ ಹೀಗೆ ವಿವರಿಸುತ್ತಾರೆ: "ಆ ನಂತರ, ಹಝ್ರತ್ ಪೈಗಂಬರ್(ಸ)ರು ಹೀಗೆ ಬರೆಸಿದರು: ಮಕ್ಕಾದ ಜನರು ಬೈತುಲ್ಲಾಹದ ತವಾಫ್ ಮಾಡುವುದನ್ನು ತಡೆಯುವುದಿಲ್ಲ." ಅದಕ್ಕೆ ತಕ್ಷಣ ಸುಹೇಲ್ ಹೇಳಿದರು ಅಲ್ಲಾಹ ಆಣೆ! ಈ ವರ್ಷ ಅದು ಸಾಧ್ಯವೇ ಇಲ್ಲ, ಇಲ್ಲವಾದರೆ ಅರಬ್ಬರಲ್ಲಿ ನಮ್ಮ ಮೂಗು ಕತ್ತರಿಸಿ ಹೋಗುತ್ತದೆ. ಹೌದು, ಮುಂದಿನ ವರ್ಷ ನೀವು ಬಂದು ತವಾಫ್ ಮಾಡಬಹುದು." ಹಝ್ರತ್ ಪೈಗಂಬರ್(ಸ) ಸರಿ ಹೀಗೆಯೇ ಬರೆಯಿರಿ ಎಂದು ಹೇಳಿದರು. ತದನಂತರ ಸುಹೇಲ್ ತಮ್ಮ ಕಡೆಯಿಂದ ಹೀಗೆ ಒಂದು ಷರತ್ತನ್ನು ಬರೆಸಿದರು: ಮಕ್ಕಾದ ಜನರಿಂದ ಯಾರಾದರು ಅವನು ಮುಸ್ಲಿಮನಾದರೂ ಸಹ ಮುಸ್ಲಿಮರೊಂದಿಗೆ ಹೋಗಿ ಸೇರುವುದಿಲ್ಲ. ಮತ್ತು ಅಂತಹವರು ಮುಸ್ಲಿಮರ ಪಾಲಿಗೆ ಹೋದರೆ ಅವರನ್ನು ವಾಪಸ್ ಕಳುಹಿಸಬೇಕಾಗುತ್ತದೆ. ಸಹಾಬಗಳು ಸುಬ್‌ಹಾನಲ್ಲಾಹ್!! ಇದು ಹೇಗೆ ಸಾಧ್ಯ ಒಬ್ಬ ವ್ಯಕ್ತಿಯು ಮುಸಲ್ಮಾನನಾಗಿ ಬಂದರೂ ಆತನನ್ನು ಹಿಂದಿರುಗಿಸುವುದೇ ಎಂದು ಕೂಗಿದರು."

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಎಂಎ, ಪುಟ-766)

ಆದಾಗ್ಯೂ, ಈ ಒಪ್ಪಂದವನ್ನು ಬರೆಯಲಾಗುತ್ತಿತ್ತು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ಹಝ್ರತ್ ಅಬು ಜಂದಲ್ ಬಿನ್ ಸುಹೇಲ್ ಬಂದರು. ಅವರು ತಮ್ಮ ಕಾಲಿಗೆ ಸರಪಣಿಗಳನ್ನು ಹೊಂದಿದ್ದರು ಮತ್ತು ಅವರು ಮಕ್ಕಾದ ತಗ್ಗು ಪ್ರದೇಶದಿಂದ ಹೊರಬಂದರು ಮತ್ತು ಮುಸ್ಲಿಮರ ಮುಂದೆ ತಮ್ಮನ್ನು ತಾವೇ ಎಸೆದರು. ಒಪ್ಪಂದ ಬರೆಯುತ್ತಿದ್ದ ಸುಹೇಲ್ ಅವರ ಪುತ್ರ ಆಗಿದ್ದರು ಅವರು ಮುಸಲ್ಮಾನರಾಗಿದ್ದರು. ಅವರ ತಂದೆ ಸುಹೇಲ್ ಅವರನ್ನು ಸರಪಳಿಯಲ್ಲಿ ಬಂಧಿಸಿದ್ದರು ಮತ್ತು ಅವರು ಜೈಲಿನಿಂದ ಹೊರಬಂದು ಸಾಮಾನ್ಯ ಮಾರ್ಗವನ್ನು ತಪ್ಪಿಸಿ ಪರ್ವತಗಳ ಮೂಲಕ ಹುದೈಬಿಯಾಗೆ ಬಂದಿದ್ದರು. ಮುಸ್ಲಿಮರು ಅವರನ್ನು ಸ್ವಾಗತಿಸಲು ಮತ್ತು ಅಭಿನಂದಿಸಲು ಪ್ರಾರಂಭಿಸಿದರು. ಹಝ್ರತ್ ಅಬು ಜಂದಲ್(ರ) ಅವರ ತಂದೆ ಸುಹೇಲ್ ಅವರನ್ನು ಕಂಡಾಗ ಅವರ ಕಡೆಗೆ ನಿಂತು ಮುಳ್ಳಿನ ಕೊಂಬೆಯಿಂದ ಮುಖಕ್ಕೆ ಹೊಡೆದು ಕತ್ತು ಹಿಡಿದುಕೊಂಡರು. ಮತ್ತೆ ಅವರು ಹೇಳಿದರು, ಓ ಮುಹಮ್ಮದ್(ಸ)! ನಾನು ನಿಮ್ಮೊಂದಿಗೆ ಒಪ್ಪಂದ ಮಾಡಿಕೊಂಡ ಮೊದಲ ವಿಷಯ ಇದಾಗಿದೆ. ಈಗ ನೀವು ಅವನನ್ನು ಹಿಂತಿರುಗಿಸಿರಿ, ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಸಂಧಿಯ ಒಪ್ಪಂದದ ಕಾರ್ಯವು ಇನ್ನೂ ಪೂರ್ಣಗೊಂಡಿಲ್ಲ. ಅದಕ್ಕೆ ಸುಹೇಲ್ ಹೇಳಿದರು ಅಲ್ಲಾಹನಾಣೆ! ಹಾಗಾದರೆ ನಾನು ನಿಮ್ಮೊಂದಿಗೆ ಯಾವ ವಿಷಯ ಮೇಲೆಯೂ ಒಪ್ಪಂದ ಮಾಡುವುದಿಲ್ಲ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಇವನನ್ನು ನನಗೆ ಬಿಟ್ಟುಬಿಡಿ. ಹಝ್ರತ್ ಪೈಗಂಬರ್(ಸ) ಅವರು ನನಗೆ ಅವನನ್ನು ಬಿಟ್ಟು ಹೋಗಬೇಕೆಂದು ಶಿಫಾರಸು ಮಾಡಿದರು. ಅದಕ್ಕೆ ಸುಹೇಲ್ ಹೇಳಿದರು: ನಾನು ಎಂದಿಗೂ ಯಾವುದೇ ಸಂದರ್ಭದಲ್ಲೂ ಅವನನ್ನು ಬಿಡುವುದಿಲ್ಲ. ಮತ್ತೊಮ್ಮೆ ಹುಝೂರ್(ಸ) ಹೇಳಿದರು ನೀವು ಆತನನ್ನು ಬಿಟ್ಟುಬಿಡಿ. ಅದಕ್ಕೆ ಸುಹೇಲ್ ನಾನು ಎಂದಿಗೂ ಹಾಗೆ ಮಾಡುವುದಿಲ್ಲ ಎಂದು ಹೇಳಿದರು. ಅವರೊಂದಿಗಿದ್ದ ಮಿಕ್ರಿಝ್ ಬಿನ್ ಹಫ್ಸ್ ಮತ್ತು ಹುವೈತಿಬ್ ಬಿನ್ ಅಬ್ದುಲ್ ಉಝ್ಝ ಹೇಳಿದರು: ನಾವು ಅವನನ್ನು ನಿಮಗಾಗಿ ಬಿಟ್ಟಿದ್ದೇವೆ. ಅವರಿಬ್ಬರೂ ಹಝ್ರತ್ ಅಬು ಜಂದಲ್(ರ) ಅವರನ್ನು ಹಿಡಿದು ಒಂದು ಡೇರೆಗೆ ಹಾಕಿದರು ಮತ್ತು ಅನುಮತಿ ನೀಡಿದರು, ಆದರೆ ಅವರ ತಂದೆ ಸುಹೇಲ್ ನಿರಾಕರಿಸಿದರು. ಹಝ್ರತ್ ಅಬು ಜಂದಲ್ ಹೇಳಿದರು, "ಓ ಮುಸ್ಲಿಮರ ಗುಂಪೇ! ನಾನು ಮುಸಲ್ಮಾನನಾಗಿದ್ದರೂ ಈಗ ನನ್ನನ್ನು ಬಹುದೇವತಾವಾದಿಗಳ ಬಳಿಗೆ ಹಿಂತಿರುಗಿಸಬಹುದೇ? ನನಗೆ ಆಗುವ ತೊಂದರೆಗಳನ್ನು ನೀವು ನೋಡುವುದಿಲ್ಲ ಮತ್ತು ನಾನು ಕಠಿಣ ಶಿಕ್ಷೆಗೆ ಒಳಗಾಗಿದ್ದೇನೆ. ಹಝ್ರತ್ ಪೈಗಂಬರ್(ಸ)ರು ತಮ್ಮ ಧ್ವನಿಯನ್ನು ಹೆಚ್ಚಿಸಿ ಹೇಳಿದರು:

ಓ ಅಬು ಜಂದಲ್! ತಾಳ್ಮೆಯಿಂದಿರಿ ಮತ್ತು ಪ್ರತಿಫಲವನ್ನು ನಿರೀಕ್ಷಿಸಿ. ಖಂಡಿತವಾಗಿಯೂ ಅಲ್ಲಾಹನು ನಿಮಗಾಗಿ ಮತ್ತು ನಿಮ್ಮ ದುರ್ಬಲ ಸಹಚರರಿಗೆ ಮೋಕ್ಷದ ಮಾರ್ಗವನ್ನು ಸೃಷ್ಟಿಸುತ್ತಾನೆ. ನಾವು ರಾಷ್ಟ್ರದೊಂದಿಗೆ ಸಂಧಿಯ ಒಪ್ಪಂದವನ್ನು ಮಾಡಿದ್ದೇವೆ ಮತ್ತು ನಾವು ಅವರಿಗೆ ಒಪ್ಪಂದವನ್ನು ನೀಡಿದ್ದೇವೆ ಮತ್ತು ಅವರು ನಮಗೆ ಒಪ್ಪಂದವನ್ನು ನೀಡಿದ್ದಾರೆ ಮತ್ತು ನಾವು ಮೋಸ ಮಾಡುವುದಿಲ್ಲ. (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-5, ಪುಟಗಳು 55-56, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಸಂದರ್ಭದಲ್ಲಿ ಹಝ್ರತ್ ಉಮರ್(ರ)ರ ಆವೇಶದ ಬಗ್ಗೆಯೂ ಪ್ರಸ್ತಾಪವಿದೆ. ಮುಸ್ಲಿಮರು ಈ ಷರತ್ತುಗಳನ್ನು ಇಷ್ಟಪಡಲಿಲ್ಲ ಮತ್ತು ಕೋಪಗೊಂಡರು ಎಂದು ಬರೆಯಲಾಗಿದೆ. ಈ ಷರತ್ತುಗಳನ್ನು ಹೊರತುಪಡಿಸಿ ಸುಹೇಲ್ ಸಂಧಿ ಮಾಡಲು ನಿರಾಕರಿಸಿದರು. ಅವರು ಸಂಧಿಯ ಒಪ್ಪಂದವನ್ನು ಇತ್ಯರ್ಥಪಡಿಸಿದಾಗ, ಉಮರ್ ಬಿನ್ ಖತ್ತಾಬ್(ರ) ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೇಳಿದರು ಯಾ ರಸೂಲಲ್ಲಾಹ್(ಸ)!! ನಾವು ಸತ್ಯವನ್ನು ಅನುಸರಿಸುತ್ತಿಲ್ಲವೇ ಮತ್ತು ಆ ಸತ್ಯನಿಷೇಧಿಗಳು ಸುಳ್ಳುಗಾರರಲ್ಲವೇ? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೌದು ಎಂದು ಹೇಳಿದರು. ಅದಕ್ಕೆ ಅವರು(ರ) ಹೇಳಿದರು, "ನಮ್ಮ ಸತ್ತವರು ಸ್ವರ್ಗದಲ್ಲಿ ಮತ್ತು ಅವರ ಸತ್ತವರು ಬೆಂಕಿಯಲ್ಲಿ ಇಲ್ಲವೇ? ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಹೌದು ಎಂದು ಹೇಳಿದರು, ಆಗ ಹಝ್ರತ್ ಉಮರ್(ರ) ಹೇಳಿದರು, "ಹುದೈಬಿಯಾದ ದಿನದಂದು ನಾವು ಮಾಡುತ್ತಿರುವ ಸಂಧಿಯನ್ನು ನಾವು ನಮ್ಮ ಧರ್ಮದ ಬಗ್ಗೆ ಇಂತಹ ಅವಮಾನವನ್ನು ಏಕೆ ಅನುಭವಿಸಬೇಕು? ನಮ್ಮ ಮತ್ತು ಅವರ ನಡುವೆ ಅಲ್ಲಾಹನು ನಿರ್ಧರಿಸುವವರೆಗೆ ನಾವು ಇಲ್ಲಿಂದ ಹಾಗೆಯೇ ಹಿಂತಿರುಗಬೇಕೇ? ಯುದ್ಧಮಾಡದೇ ಹಿಂದಿರುಗುವುದೇ ನಮ್ಮ ಹಕ್ಕನ್ನು ತೆಗೆದುಕೊಳ್ಳದೆ ಹೊರಟು ಹೋಗುವುದೇ. ಹಝ್ರತ್ ಪೈಗಂಬರ್(ಸ) ಹೇಳಿದರು:

ನಾನು ಅಲ್ಲಾಹನ ಭಕ್ತ ಮತ್ತು ಅವನ ಸಂದೇಶವಾಹಕನಾಗಿದ್ದೇನೆ ಮತ್ತು ನಾನು ಅವನಿಗೆ ಅವಿಧೇಯನಾಗುವುದಿಲ್ಲ ಮತ್ತು ಅವನು ನನ್ನನ್ನು ಎಂದಿಗೂ ಕೈಬಿಡುವುದಿಲ್ಲ. ಮತ್ತು ಅವನು ನನಗೆ ಸಹಾಯ ಮಾಡಲಿದ್ದಾನೆ.

ಆದ್ದರಿಂದ ಉಮರ್ ಬಿನ್ ಖತ್ತಾಬ್ ಹೇಳಿದರು, ನಾವು ಶೀಘ್ರದಲ್ಲೇ ಬೈತುಲ್ಲಾಹ್‌ಗೆ ಬಂದು ಬೈತುಲ್ಲಾಹ್‌ದ ತವಾಫ್ ಮಾಡುತ್ತೇವೆ ಎಂದು ನೀವು ನಮಗೆ ಹೇಳಲಿಲ್ಲವೇ? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು ಹೌದು! ನೀವು ಈ ವರ್ಷ ಬರುತ್ತೀರಿ ಎಂದು ಹೇಳಿದ್ದೆನಾ? ಹಝ್ರತ್ ಉಮರ್(ರ) ಇಲ್ಲ ಎಂದು ಉತ್ತರಿಸಿದರು. ಆಗ ಅವರು(ಸ) ಹೇಳಿದರು: ಖಂಡಿತವಾಗಿಯೂ ನೀವು ಬೈತುಲ್ಲಾಹ್‌ನ ಬಳಿಗೆ ಬಂದು ಅದರ ತವಾಫ್ ಮಾಡುತ್ತೀರಿ.

ಮತ್ತೆ ಹಝ್ರತ್ ಉಮರ್(ರ) ರವರು ಕೋಪದ ಸ್ಥಿತಿಯಲ್ಲಿ ಹಝ್ರತ್ ಅಬೂಬಕರ್(ರ) ರವರ ಬಳಿ ಹೋದರು ಮತ್ತು ತಾಳ್ಮೆವಹಿಸಲಿಲ್ಲ. ಅವರು ಹೇಳಿದರು, ಓ ಅಬೂಬಕರ್! ಅಲ್ಲಾಹನ ಈ ಪ್ರವಾದಿಗಳು ಸತ್ಯವಂತರರಲ್ಲವೇ? ಹಝ್ರತ್ ಅಬೂಬಕರ್(ರ) ಹೌದು ಎಂದು ಹೇಳಿದರು. ಮತ್ತೆ ಹಝ್ರತ್ ಉಮರ್(ರ) ಹೇಳಿದರು, ಅವರು ಸುಳ್ಳಿನ ಮೇಲೆ ಮತ್ತು ನಾವು ಸತ್ಯದ ಮೇಲೆ ಇಲ್ಲವೇ? ನಮ್ಮ ಸತ್ತವರು ಸ್ವರ್ಗಕ್ಕೆ ಹೋಗುವುದಿಲ್ಲವೇ ಮತ್ತು ಅವರ ಸತ್ತವರು ನರಕಕ್ಕೆ ಹೋಗುವುದಿಲ್ಲವೇ? ಹಝ್ರತ್ ಅಬೂಬಕರ್(ರ) ಖಂಡಿತವಾಗಿಯೂ ಹೌದು ಎಂದು ಹೇಳಿದರು! ಹಝ್ರತ್ ಉಮರ್(ರ) ಹೇಳಿದರು: ಹಾಗಾದರೆ ನಾವು ನಮ್ಮ ಧರ್ಮದಲ್ಲಿ ಏಕೆ ದೌರ್ಬಲ್ಯವನ್ನು ತೋರಬೇಕು ಮತ್ತು ನಮ್ಮ ಮತ್ತು ಅವರ ನಡುವೆ ಅಲ್ಲಾಹನು ನಿರ್ಧರಿಸದ ಪರಿಸ್ಥಿತಿಗೆ ಮರಳಬೇಕು. ಅದಕ್ಕೆ ಹಝ್ರತ್ ಅಬೂಬಕರ್(ರ) ಹೇಳಿದರು: ಅವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಮತ್ತು ಅವರ ಪ್ರಭುವಿಗೆ ಅವಿಧೇಯರಾಗುವುದಿಲ್ಲ ಮತ್ತು ಅಲ್ಲಾಹನು ನಿಮಗೆ(ಸ) ಸಹಾಯ ಮಾಡುವನು. ನಂತರ ಅವರು ಹಝ್ರತ್ ಉಮರ್(ರ) ಅವರಿಗೆ ಹೇಳಿದರು, ಆದ್ದರಿಂದ ಮರಣ ಹೊಂದುವವರೆಗೂ ಹಝ್ರತ್ ಪೈಗಂಬರ್(ಸ) ಅವರ ವಿಧೇಯತೆಗೆ ನಿಮ್ಮನ್ನು ನೀವು ಲಗತ್ತಿಸಿರಿ. ಅಲ್ಲಾಹನ ಆಣೆ! ಅವರು ಬಲಭಾಗದಲ್ಲಿದ್ದಾರೆ (ಸತ್ಯವಂತರಾಗಿದ್ದಾರೆ) ಮತ್ತು ಒಂದು ವರದಿಯ ಪ್ರಕಾರ ಅವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂದು ವರದಿಯಾಗಿದೆ. ಆಗ ಹಝ್ರತ್ ಉಮರ್(ರ) ಹೇಳಿದರು, ನಿಸ್ಸಂದೇಹವಾಗಿಯೂ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ಅಲ್ಲಾಹನ ಸಂದೇಶವಾಹಕರು ಎಂದು ನಾನು ಸಾಕ್ಷಿ ಹೇಳುತ್ತೇನೆ. ಮತ್ತೆ ಹೇಳಿದರು: ನಾನು ಶೀಘ್ರದಲ್ಲೇ ಬೈತುಲ್ಲಾಹ್‌ಗೆ ಬಂದು ತವಾಫ್ ಮಾಡುತ್ತೇವೆ ಎಂದು ಹೇಳುತ್ತಿರಲಿಲ್ಲವೇ? ಹಝ್ರತ್ ಅಬೂಬಕ್ಕರ್(ರ) ಹೌದು ಎಂದು ಉತ್ತರಿಸುತ್ತಾ ಹೇಳಿದರು: ಹಝ್ರತ್ ಪೈಗಂಬರ್(ಸ)ರು ನಿಮಗೆ ಈ ವರ್ಷ ತವಾಫ್ ಮಾಡಬೇಕೆಂದು ಸುದ್ದಿ ನೀಡಿದ್ದಾರೆಯೇ? ಹಝ್ರತ್ ಉಮರ್(ರ) ಇಲ್ಲ ಎಂದು ಹೇಳಿದರು. ಹಝ್ರತ್ ಅಬುಬಕರ್(ರ) ಹೇಳಿದರು: ಹಾಗಾದರೆ ನೀವು ಖಂಡಿತವಾಗಿಯೂ ಬೈತುಲ್ಲಾಹಗೆ ಹೋಗಿ ತವಾಫ್ ಮಾಡುತ್ತೀರಿ. ಆದಾಗ್ಯೂ, ಈ ಷರತ್ತುಗಳು ಹಝ್ರತ್ ಉಮರ್(ರ) ಅವರಿಗೆ ಇಷ್ಟವಾಗಲಿಲ್ಲ.

ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಉಮರ್(ರ) ಹೇಳಿದರು ಅಲ್ಲಾಹ ಆಣೆ! ನಾನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗಿನಿಂದ, ಹುದೈಬಿಯಾ ದಿನದಂದು ಹೊರತುಪಡಿಸಿ ನಾನು ಎಂದಿಗೂ ಅನುಮಾನಿಸಲಿಲ್ಲ ಮತ್ತು ಹಝ್ರತ್ ಪೈಗಂಬರ್(ಸ)ರ ಮಾತುಗಳಿಗೆ ಉತ್ತರಿಸುವುದನ್ನು ಮುಂದುವರೆಸಿದೆ. ಅದೇನೆಂದರೆ, ನಾನು ಯಾವತ್ತೂ ಎದುರಿನಿಂದ ಮಾತನಾಡಲಿಲ್ಲ, ಆದರೆ ನಾನು ಆ ಸಮಯದಲ್ಲಿ ಮಾತನಾಡುವುದನ್ನು ಮುಂದುವರೆಸಿದೆ. ಹಝ್ರತ್ ಅಬು ಉಬೈದಾ ಬಿನ್ ಜರ್‍ರಾಹ್(ರ) ಹೇಳಿದರು, ಓ ಇಬ್ನ್ ಖತ್ತಾಬ್! ಹಝ್ರತ್ ಪೈಗಂಬರ್(ಸ)ರು ಹೇಳುವುದನ್ನು ನೀವು ಏಕೆ ಕೇಳಬಾರದು? ಸೈತಾನನಿಂದ ಅಲ್ಲಾಹನಲ್ಲಿ ಆಶ್ರಯ ಪಡೆಯಿರಿ ಮತ್ತು ನಿಮ್ಮ ಅಭಿಪ್ರಾಯವನ್ನು ಸರಿಪಡಿಸಿ. ಹಝ್ರತ್ ಉಮರ್(ರ) ಹೇಳಿದರು ಆಗ ನಾನು ಅಲ್ಲಾಹನಲ್ಲಿ ಆಶ್ರಯ ಪಡೆಯಲು ಪ್ರಾರಂಭಿಸಿದೆ. ಆ ದಿನ ನನಗೆ ನಾಚಿಕಡ ಆದಷ್ಟು ಎಂದಿಗೂ ಆಗಿರಲಿಲ್ಲ. ನಂತರ ನಾನು ಆರಂಭದಲ್ಲಿ ಆದೇಶವನ್ನು ಪಾಲಿಸುವಲ್ಲಿ ತಡೆದ ಪಾಪವನ್ನು ಕ್ಷಮಿಸಲು ಒಳ್ಳೆಯ ಕಾರ್ಯಗಳನ್ನು ಮುಂದುವರಿಸಿದೆ. ಹುದೈಬಿಯಾ ಸಂದರ್ಭದಲ್ಲಿ ನಾನು ಹಝ್ರತ್ ಪೈಗಂಬರ್(ಸ)ರೊಂದಿಗೆ ನಡೆಸಿದ ಸಂಭಾಷಣೆಯಿಂದಾಗಿ, ನನಗೆ ಈಗ ಒಳಿತು ಲಭಿಸಿದೆ ಎಂದು ಭಾವಿಸುವವರೆಗೆ ನಾನು ದಾನವನ್ನು ನೀಡುತ್ತಿದ್ದೆ, ಉಪವಾಸ ಮತ್ತು ಗುಲಾಮರನ್ನು ಮುಕ್ತಗೊಳಿಸುತ್ತಿದ್ದೆ. ಅಂದರೆ ಸರ್ವಶಕ್ತನಾದ ಅಲ್ಲಾಹನು ಈಗ ಕ್ಷಮಿಸುತ್ತಾನೆ ಎಂದು ಅರಿತುಕೊಂಡೆ. (ಸಬ್ಲುಲ್ ಹುಆ ವರ್‍ರಶಾದ್, ಸಂಪುಟ-5, ಪುಟಗಳು 52-53, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಆ ಘಟನೆಯನ್ನು ಹಝ್ರತ್ ಅಬೂಬಕರ್(ರ)ರ ಗುಣವನ್ನು ವಿವರಿಸುತ್ತಾ ಹೀಗೆ ಹೇಳಿರುವರು: "ಒಂದು ಬಾರಿ ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು:

ನಾನು ನಿಮಗೆ ಬಹಳಷ್ಟು ಆದೇಶಗಳನ್ನು ನೀಡಿದ್ದೇನೆ. ಆದರೆ ನಿಮ್ಮಲ್ಲಿ ಅತ್ಯಂತ ನಿಷ್ಠಾವಂತರಲ್ಲೂ ಕೆಲವೊಮ್ಮೆ ಅದನ್ನು ವಿರೋಧಿಸುವ ಗುಣವನ್ನು ನಾನು ಕಂಡಿದ್ದೇನೆ. ಆದರೆ ಅಬೂಬಕರ್(ರ)ರಲ್ಲಿ ನಾನು ಈ ಸ್ವಭಾವವನ್ನು ಎಂದಿಗೂ ಕಂಡಿಲ್ಲ."

ಹಝ್ರತ್ ಅಬೂಬಕರ್(ರ) ಅವರು ನಾನು ಹೇಳಿದ್ದನ್ನು ಅವರು ಇಷ್ಟಪಟ್ಟರೂ ಇಷ್ಟಪಡದಿದ್ದರೂ ನಿರಾಕರಿಸಲಿಲ್ಲ ಎಂದು ಅವರ ಸದ್ಗುಣವನ್ನು ಹೇಳಿದರು. ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ, ಹುದೈಬಿಯಾ ಸಂಧಿಯ ಸಂದರ್ಭದಲ್ಲಿ, ಹಝ್ರತ್ ಉಮರ್(ರ) ನಂತಹ ವ್ಯಕ್ತಿ ಕೂಡ ಭಯಭೀತರಾಗಿದ್ದರು ಮತ್ತು ಅವರು ಅದೇ ಭಯಭೀತರಾಗಿದ್ದ ಸಂದರ್ಭದಲ್ಲಿ ಹಝ್ರತ್ ಅಬೂಬಕರ್(ರ) ಅವರ ಸನ್ನಿಧಿಗೆ ಹೋಗಿ ಹೇಳಿದರು: ನಾವು ಉಮ್ರಾ ನಿರ್ವಹಿಸುತ್ತೇವೆ ಎಂದು ಸರ್ವಶಕ್ತನಾದ ಅಲ್ಲಾಹನು ನಮಗೆ ಭರವಸೆ ನೀಡಿರಲಿಲ್ಲವೇ? ಅದಕ್ಕೆ ಅವರು ಹೌದು ಎಂದು ಉತ್ತರಿಸಿದರು. ಅವರು ಹೇಳಿದರು, ದೇವರು ನಮಗೆ ಬೆಂಬಲ ಮತ್ತು ಸಹಾಯ ಮಾಡುತ್ತಾನೆ ಎಂದು ನಮಗೆ ಭರವಸೆ ನೀಡಲಿಲ್ಲವೇ? ಹಝ್ರತ್ ಅಬೂಬಕರ್(ರ) ಹೌದು ಎಂದರು. ಅವರು ಹೇಳಿದರು, ಹಾಗಾದರೆ ನಾವು ಉಮ್ರಾ ಮಾಡಿದ್ದೇವೆಯೇ? ಹಝ್ರತ್ ಅಬೂಬಕರ್(ರ) ಹೇಳಿದರು ಉಮರ್(ರ)! ಈ ವರ್ಷ ನಾವು ಉಮ್ರಾ ಮಾಡುತ್ತೇವೆ ಎಂದು ಅಲ್ಲಾಹನು ನಮಗೆ ಯಾವಾಗ ಹೇಳಿದನು? ಆಗ ಅವರು ಹೇಳಿದರು, ನಮಗೆ ಗೆಲುವು ಮತ್ತು ಬೆಂಬಲ ಲಭಿಸಿದೆಯೇ? ಹಝ್ರತ್ ಅಬುಬಕರ್(ರ) ಹೇಳಿದರು, ಅಲ್ಲಾಹನು ಮತ್ತು ಅವನ ಸಂದೇಶವಾಹಕ ಅವರು ವಿಜಯ ಮತ್ತು ಬೆಂಬಲದ ಅರ್ಥವನ್ನು ನಮಗಿಂತ ಉತ್ತಮವಾಗಿ ತಿಳಿದಿದ್ದಾರೆ, ಆದರೆ ಉಮರ್ ಈ ಉತ್ತರದಿಂದ ತೃಪ್ತರಾಗಲಿಲ್ಲ ಮತ್ತು ಅವರು ಹಝ್ರತ್ ಪೈಗಂಬರ್(ಸ)ರನ್ನು ಅದೇ ಗಾಬರಿಯಾಗಿರುವ ಸ್ಥಿತಿಯಲ್ಲಿ ಸಂಪರ್ಕಿಸಿ ಹೇಳಿದರು: ಯಾ ರಸೂಲಲ್ಲಾಹ್(ಸ)! ನಾವು ತವಾಫ್ ಮಾಡುತ್ತಾ ಮಕ್ಕಾವನ್ನು ಪ್ರವೇಶಿಸುತ್ತೇವೆ ಎಂದು ಅಲ್ಲಾಹನು ನಮಗೆ ಭರವಸೆ ನೀಡಲಿಲ್ಲವೇ? ಅದಕ್ಕೆ ಅವರು(ಸ) ಹೌದು ಎಂದು ಉತ್ತರಿಸಿದರು. 'ನಾವು ಅಲ್ಲಾಹನ ಜಮಾಅತ್ ಅಲ್ಲವೇ? ಎಂದು ಪ್ರಶ್ನಿಸಿದರು. ಮತ್ತು ನಮ್ಮನ್ನು ವಿಜಯ ಮತ್ತು ಬೆಂಬಲ ನೀಡುವನು ಎಂದು ಅಲ್ಲಾಹನು ವಾಗ್ದಾನ ಮಾಡಿರಲಿಲ್ಲವೇ? ಅದಕ್ಕೆ ಅವರು ಹೌದು ಎಂದು ಉತ್ತರಿಸಿದರು. ಹಝ್ರತ್ ಉಮರ್(ರ) ಹೇಳಿದರುಯಾ ರಸೂಲಲ್ಲಾಹ್(ಸ)!! ಹಾಗಾದರೇ ನಾವು ಉಮ್ರಾ ನಿರ್ವಹಿಸಿದ್ದೇವೆಯೇ? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಈ ವರ್ಷ ಉಮ್ರಾ ಮಾಡುತ್ತೇವೆ ಎಂದು ಅಲ್ಲಾಹನು ನಮಗೆ ಯಾವಾಗ ಹೇಳಿರುವೆನು. ಈ ವರ್ಷ ಉಮ್ರಾ ನಡೆಯಲಿದೆ ಎಂಬುದು ನಮ್ಮ ಆಲೋಚನೆಯಾಗಿತ್ತು. ಅಲ್ಲಾಹನು ಯಾವುದೇ ನಿರ್ಣಯವನ್ನು ಮಾಡಲಿಲ್ಲ. ಅವರು(ರ) ಹೇಳಿದರು, ಹಾಗಾದರೆ ಗೆಲುವು ಮತ್ತು ವಿಜಯದ ವಾಗ್ದಾನದ ಅರ್ಥವೇನು? 'ಅಲ್ಲಾಹನ ಸಹಾಯ ಖಂಡಿತವಾಗಿಯೂ ನಮಗೆ ಲಭಿಸುತ್ತದೆ, ಅಲ್ಲಾಹನ ವಾಗ್ದಾನವು

ಹೇಗಾದರೂ ಈಡೇರುತ್ತದೆ. ಹಝ್ರತ್ ಅಬೂಬಕರ್(ರ.ಅ) ರವರು ನೀಡಿದ ಉತ್ತರವು ಹಝ್ರತ್ ಪೈಗಂಬರ್(ಸ.ಅ) ರವರು ನೀಡಿದ ಉತ್ತರದಂತೆಯೇ ಇದೆ.(ಖುತ್‌ಬಾತೆ ಮಹ್ಮೂದ್, ಸಂಪುಟ–20, ಪುಟ–382)

ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ) ಅವರ ಸನ್ನಿಧಿಗೆ ಹೋಗಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ ಮತ್ತು ಹಝ್ರತ್ ಅಬೂಬಕರ್(ರ) ಅವರ ಬಳಿಗೆ ಹೋಗಿ ಅದೇ ಮಾತನ್ನು ಹೇಳುವ ಬಗ್ಗೆ ವಿವಿಧ ವರದಿಗಳಿವೆ. ಹಿಂದಿನ ನಿರೂಪಣೆ ಮತ್ತು ಈಗಿನ ನಿರೂಪಣೆಯಂತೆ ಸೆಟ್ಟಿಂಗ್ ವಿಭಿನ್ನವಾಗಿದೆ, ಆದರೆ ಘಟನೆಯ ಒಂದೇ ಆಗಿದೆ ಮತ್ತು ಅದರ ಹಿಂದೆ ಮತ್ತು ಮುಂದಕ್ಕೆ ಈ ಘಟನೆಯ ಸತ್ಯಾಸತ್ಯತೆಗೆ ಯಾವುದೇ ವ್ಯತ್ಯಾಸವಿಲ್ಲ.

ಸಂಧಿಯ ಒಪ್ಪಂದದ ಬರವಣಿಗೆಗೆ ಸಂಬಂಧಿಸಿದಂತೆ, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಸೀರತ್ ಖಾತಮನ್ನಬಿಯೀನ್(ಸ) ನಲ್ಲಿ ಬರೆಯುತ್ತಾರೆ, "ಆದಾಗ್ಯೂ, ಅಂತೂ ಬಹಳಷ್ಟು ಚರ್ಚೆಯ ನಂತರ ಈ ಒಪ್ಪಂದ ಪೂರ್ಣಗೊಂಡಿತು. ಬಹುತೇಕ ವಿಷಯಗಳಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಮಾತನ್ನು ಬಿಟ್ಟು ಖುರೈಶಿಯರ ಬೇಡಿಕೆಗಳನ್ನು ಒಪ್ಪಿದರು ಹಾಗೂ ಕಅ್‌ಬ ಭವನದ ಗೌರವಕ್ಕೆ ಸಂಬಂಧಪಟ್ಟ ಖುರೈಶಿಯರ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂಬ ಪ್ರತಿಜ್ಞೆಯನ್ನು ದೈವಿಕ ಇಂಗಿತ ಪ್ರಕಾರ ಹಝ್ರತ್ ಪೈಗಂಬರ್(ಸ) ಪ್ರಾಮಾಣಿಕತೆಯೊಂದಿಗೆ ಪಾಲಿಸಿದರು. ಆದಾಗ್ಯೂ, ಈ ಒಪ್ಪಂದದ ನಿಯಮಗಳು ಕೆಳಕಂಡಂತಿವೆ:

1. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಗಳು ಈ ವರ್ಷ ಹಿಂತಿರುಗಬೇಕು.

2. ಮುಂದಿನ ವರ್ಷ ಅವರು ಮಕ್ಕಾಗೆ ಬಂದು ಉಮ್ರಾ ಮಾಡಬಹುದು, ಆದರೆ ನಿಯಾಮ್‌ನಲ್ಲಿ ಕಟ್ಟಿದ ಖಡ್ಗವನ್ನು ಹೊರತುಪಡಿಸಿ ಯಾವುದೇ ಆಯುಧವನ್ನು ತೆಗೆದುಕೊಳ್ಳಬಾರದು ಮತ್ತು ಮೂರು ದಿನಗಳಿಗಿಂತ ಹೆಚ್ಚು ಕಾಲ ಮಕ್ಕಾದಲ್ಲಿ ಇರಬಾರದು.

3. ಮಕ್ಕಾದಿಂದ ಒಬ್ಬ ವ್ಯಕ್ತಿ ಮದೀನಾಗೆ ಹೋದರೆ, ಅವನು ಮುಸ್ಲಿಮನಾಗಿದ್ದರೂ, ಹಝ್ರತ್ ಪೈಗಂಬರ್(ಸ) ಅವರಿಗೆ ಮದೀನಾದಲ್ಲಿ ಆಶ್ರಯ ನೀಡದೆ ಹಿಂತಿರುಗಿ ಕಳುಹಿಸುತ್ತಾರೆ. ಇದರ ಬಗ್ಗೆ ಸಹೀಹ್ ಬುಖಾರಿಯಲ್ಲಿ ಹೀಗೆ ಉಲ್ಲೇಖವಿದೆ **ಲ ಯಅ್‌ತೀಕ ಮಿನ್ನಾ ರಜುಲುನ್ ವ ಇನ್ ಕಾನ ಅಲ ದೀನಿಕ ಇಲ್ಲಾ ರದದ್‌ತಹೂ ಇಲೈನಾ.** ಅಂದರೆ: ನಮ್ಮಲ್ಲಿ ಒಬ್ಬ ವ್ಯಕ್ತಿ ನಿಮ್ಮ ಬಳಿಗೆ ಹೋದರೆ, ನೀವು ಅವನನ್ನು ಹಿಂತಿರುಗಿಸುತ್ತೀರಿ. ಆದರೆ ಯಾರಾದರು ಮುಸಲ್ಮಾನನಾಗಿ ಮದೀನಾವನ್ನು ತೊರೆದು ಮಕ್ಕಾಗೆ ಬಂದರೆ ಅವನನ್ನು ಹಿಂದಿರುಗಿಸಲಾಗುವುದಿಲ್ಲ." ಅಂದರೆ ಅವರು ಯಾರಾದರು ಮುಸಲ್ಮಾನನಾಗಿ ಮದೀನಕ್ಕೆ ಹೋದರೆ ಆತನನ್ನು ಹಿಂದಿರುಗಿಸಬೇಕು ಆದರೆ ಯಾರಾದರು ಮುಸಲ್ಮಾನನು ಮಕ್ಕಾಗೆ ಬಂದರೆ ಮತ್ತು ಆತನು ಸೆರೆಹಿಡಿಯಲ್ಪಟ್ಟರೆ ಆತನನ್ನು ಹಿಂತಿರುಗಿಸಲಾಗುವುದಿಲ್ಲ ಎಂದು ಒಪ್ಪಂದವನ್ನು ಬರೆಸಿಕೊಂಡರು.

ಮತ್ತೊಂದು ವರದಿಯ ಪ್ರಕಾರ ಮಕ್ಕಾದಿಂದ ಒಬ್ಬ ವ್ಯಕ್ತಿ ತನ್ನ ಪೋಷಕರ ಅನುಮತಿಯಿಲ್ಲದೆ ಮದೀನಾಗೆ ಬಂದರೆ, ಅವನನ್ನು ಹಿಂದಿರುಗಿಸಲಾಗುತ್ತದೆ.

4. ಅರಬ್ ಗೋತ್ರಗಳಲ್ಲಿ ಯಾರಾದರು ಮುಸ್ಲಿಮರ ಪ್ರತಿಜ್ಞಬದ್ಧರಾಗಲು ಅಥವಾ ಮಕ್ಕಾದ ಜನರ ಪ್ರತಿಜ್ಞಬದ್ಧರಾಗಲು ಬಯಸಿದರೆ ಅವರು ಆಗಬಹುದು.

ಮತ್ತು ಐದನೇ ಷರತ್ತು ಹೀಗಿತ್ತು

5. ಈ ಒಪ್ಪಂದವು ಪ್ರಸ್ತುತ ಹತ್ತು ವರ್ಷಗಳವರೆಗೆ ಇರುತ್ತದೆ ಮತ್ತು ಈ ಅವಧಿಯಲ್ಲಿ ಖುರೈಶ್ ಮತ್ತು ಮುಸ್ಲಿಮರ ನಡುವೆ ಯುದ್ಧ ಸ್ಥಗಿತವಾಗಿರುತ್ತದೆ."

ಹುದೈಬಿಯಾ ಸಂಧಿಯ ಸಾಕ್ಷಿಯ ವಿವರಣೆ ಹೀಗಿದೆ: "ಈ ಒಪ್ಪಂದದ ಎರಡು ನಕಲುಪ್ರತಿಗಳನ್ನು ಮಾಡಲಾಗಿತ್ತು. ಸಾಕ್ಷಿಗಳಾಗಿ ಉಭಯ ಪಕ್ಷಗಳ ಅನೇಕ ಆದರಣೀಯ ವ್ಯಕ್ತಿಗಳು ಅದರಲ್ಲಿ ಸಹಿ ಹಾಕಿದರು. ಮುಸ್ಲಿಮರ ಪರವಾಗಿ ಸಹಿ ಮಾಡಿದವರಲ್ಲಿ ಹಝ್ರತ್ ಅಬುಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಉಸ್ಮಾನ್(ರ) (ಅವರು ಮಕ್ಕಾದಿಂದ ಹಿಂತಿರುಗಿದ್ದರು), ಅಬ್ದುಲ್–ರಹಮಾನ್ ಬಿನ್ ಔಫ್(ರ), ಸಅದ್ ಬಿನ್ ಅಬಿ ವಕ್ಕಾಸ್(ರ) ಮತ್ತು ಅಬು ಉಬೈದಾಹ್(ರ). ಒಪ್ಪಂದ ಪೂರ್ಣಗೊಂಡ ನಂತರ ಸುಹೈಲ್ ಬಿನ್ ಅಮ್ರ್ ಒಪ್ಪಂದದ ಒಂದು ನಕಲುಪ್ರತಿಯನ್ನು ಪಡೆದುಕೊಂಡು ಮಕ್ಕಾಗೆ ಮರಳಿ ಹೋದರು. ಇನ್ನೊಂದು ನಕಲುಪ್ರತಿ ಹಝ್ರತ್ ಪೈಗಂಬರ್(ಸ)ರ ಬಳಿಯಲ್ಲಿ ಇತ್ತು.
(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಎಂಎ, ಪುಟ 768–769)

ಸಹಾಬಿಯರ ಕಳವಳದ ಬಗ್ಗೆಯೂ ಪ್ರಸ್ತಾಪ ಬರುತ್ತದೆ. ಈ ಕಾರ್ಯಭಾರ ಮುಕ್ತಾಯಗೊಂಡಾಗ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೀಗೆ ಹೇಳಿದರು: ಎದ್ದೇಳಿರಿ, ತಮ್ಮ ಒಂಟೆಗಳನ್ನು ಕೊಯ್ಯಿರಿ ಮತ್ತು ತಲೆಮುಂಡಣ ಮಾಡಿರಿ. ಹಝ್ರತ್ ಪೈಗಂಬರ್(ಸ) ಈ ಮಾತನ್ನು ಮೂರು ಬಾರಿ ಹೇಳಿದರು. ಆದರೂ ಅವರಲ್ಲಿ ಯಾರೂ ಎದ್ದೇಳಲಿಲ್ಲ. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–5, ಪುಟ–56, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದರ ಕುರಿತು ಹೀಗೆ ಬರೆದಿದ್ದಾರೆ: ಸುಹೇಲ್ ಹಿಂದಿರುಗಿದಾಗ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಹೀಗೆ ಹೇಳಿದರು: ಎದ್ದೇಳಿರಿ, ತಮ್ಮ ಒಂಟೆಗಳನ್ನು ವಧಿಸಿರಿ ಮತ್ತು ತಲೆಮುಂಡಣ ಮಾಡಿರಿ. (ತ್ಯಾಗದ ನಂತರ ತಲೆಯ ಕೂದಲನ್ನು ಮುಂಡಣ ಮಾಡಲಾಗುತ್ತದೆ ಅಥವಾ ಕತ್ತರಿಸಲಾಗುತ್ತದೆ) ಮತ್ತು ಹಿಂದಿರುಗಲು ಸಿದ್ಧರಾಗಿರಿ" ಆದರೆ ಸಹಾಬಗಳು ಈ ಬಾಹ್ಯವಾದ ಅವಮಾನಕರ ಒಪ್ಪಂದದ ಕಾರಣ ಮತ್ತು ಅದರೊಂದಿಗೆ ಹಝ್ರತ್ ಪೈಗಂಬರ್(ಸ)ರು ನಮಗೆ ಒಂದು ದೈವ ಧ್ವಪ್ನದ ಆಧಾರದ ಮೇರೆಗೆ ಇಲ್ಲಿ ಕರೆತಂದಿದ್ದರು ಮತ್ತು ಸರ್ವಶಕ್ತನಾದ ಅಲ್ಲಾಹನು ಸ್ವಪ್ನದಲ್ಲಿ ಬೈತುಲ್ಲಾಹ್‌ದ ತವಾಫ್‌ನ ದೃಶ್ಯಗಳನ್ನು ಸಹ ಕಾಣಿಸಿದನು ಎಂಬ ಆಲೋಚನೆಗಳು ಅವರ ಮನಸ್ಸಿಗೆ ಬಂದಾಗ ಅವರ ಮನಃಸ್ಥಿತಿಯಲ್ಲಿ ಬಹಳ ಕಳವಳಚುಂಟಾಯಿತು ಹೀಗೆ ಅವರು ನಿರ್ಜೀವಿಗಳಂತೆ ವರ್ತಿಸುತ್ತಿದ್ದರು. ಅವರು ದೇವರ ಸಂದೇಶವಾಹಕರಲ್ಲಿ ಸಂಪೂರ್ಣ ನಂಬಿಕೆಯನ್ನು ಹೊಂದಿದ್ದರು ಮತ್ತು ಅವರ ವಾಗ್ದಾನದಲ್ಲಿ ಸಂಪೂರ್ಣ ನಂಬಿಕೆಯನ್ನು ಹೊಂದಿದ್ದರು, ಆದರೆ ಅಗತ್ಯವು ಮಾನವೀಯತೆಯ ಮಾನವ ಬೇಡಿಕೆಗಳಿಗೆ ಅಧೀನವಾಗಿದೆ. "ಈ ಸ್ಪಷ್ಟವಾದ ವೈಫಲ್ಯದಿಂದ ಅವರ ಹೃದಯಗಳು ದುಃಖದಿಂದ ತುಂಬಿದ್ದವು." ತಕ್ಷಣದ ಪ್ರತಿಕ್ರಿಯೆ ಹೀಗಿತ್ತು. "ಅದಕ್ಕಾಗಿಯೇ ಹಝ್ರತ್ ಪೈಗಂಬರ್(ಸ)ರು ಅವರಿಗೆ, 'ಈಗ ನೀವು ಬಲಿ ನೀಡುವ ಪ್ರಾಣಿಗಳನ್ನು ಇಲ್ಲಿಯೇ ವಧೆ ಮಾಡಿ' ಎಂದು ಹೇಳಿದಾಗ. ಮಕ್ಕದಲ್ಲಿ ನಾವು ಪ್ರವೇಶಿದ್ದೇವೆಯೇ ಅಥವಾ ಇಲ್ಲವೇ, ಕಅ್‌ಬ ಭವನಕ್ಕೆ ಹೋಗಿದ್ದೇವೆಯೇ ಅಥವಾ ಇಲ್ಲವೇ, ತವಾಫ್ ಮಾಡಿದ್ದೇವೆಯೇ ಅಥವಾ ಇಲ್ಲವೇ. ಇಲ್ಲಿ ನಾವು ಕುಳಿತಿದ್ದೇವೆ ಖುರ್ಬಾನಿಗಳನ್ನು ಮಾಡಿರಿ "ಮತ್ತು ಇಲ್ಲಿಂದ ಹಿಂದಿರುಗಿರಿ ಎಮದು ಹೇಳಿದಾಗ ಯಾವ ಸಹಾಬಿಯು ಅವರ ಮಾತಿಗೆ ಪ್ರತಿಕ್ರೀಯಿಸಲಿಲ್ಲ." ಯಾರೂ ಸಹ ತಮ್ಮ ಜಾಗದಿಂದ ಅಲುಗಾಡಲಿಲ್ಲ. ಖುರ್ಬಾನಿ ಮಾಡಲು ತಂದ ಜಾನುವಾರುಗಳೊಂದಿಗೆ ಕುಳಿತಿದ್ದರು. "ಇದಕ್ಕೆ ಕಾರಣ ಅವರು (ನೌಝುಬಿಲ್ಲಾಹ್) ಹಝ್ರತ್ ಪೈಗಂಬರ್(ಸ)ರಿಗೆ ಅವಿಧೇಯರಾಗಿದ್ದರಿಂದಲ್ಲ, ಏಕೆಂದರೆ ಪ್ರಪಂಚದ ಪರದೆಯ ಮೇಲೆ ಸಹಾಬಿಗಳಿಗಿಂತ ಹೆಚ್ಚು ವಿಧೇಯ ಗುಂಪು ಮತ್ತೊಂದು ಇರಲಿಲ್ಲ. ಆದ್ದರಿಂದ, ಅವರ ಕಡೆಯಿಂದ ಈ ಅನುಸರಣೆ ದಂಗೆ ಅಥವಾ ಅವಿಧೇಯತೆಯ ಬಣ್ಣದಲ್ಲಿ ಇರಲಿಲ್ಲ, ಬದಲಿಗೆ ದುಃಖ ಮತ್ತು ಸ್ಪಷ್ಟವಾದ ಅವಮಾನದ ಭಾವನೆಯು ಅವರನ್ನು ತುಂಬಾ ಇಟ್ಟುಕೊಂಡಿದ್ದರಿಂದ ಅವರು ಕೇಳುತ್ತಿರುವಾಗ ಅವರು ಕೇಳಲಿಲ್ಲ ಮತ್ತು ಅವರು ನೋಡುತ್ತಿರುವಾಗಲೂ ಅವರ ಕಣ್ಣುಗಳು ಅದನ್ನು ಮಾಡಲಿಲ್ಲ. ಹಝ್ರತ್ ಪೈಗಂಬರ್(ಸ) ಈ ಮಾತನ್ನು ಮೂರು ಬಾರಿ ಹೇಳಿದರು. ಆದರೂ ಅವರಲ್ಲಿ ಯಾರೂ ಎದ್ದೇಳಲಿಲ್ಲ. ಹಝ್ರತ್ ಪೈಗಂಬರ್(ಸ)ರಿಗೆ ಇದರ ಬಗ್ಗೆ ದುಃಖವಾಯಿತು. ಅವರು ಮೌನವಾಗಿ ತಮ್ಮ ಡೇರೆಯ ಒಳಗೆ ಹೋದರು. ಹಝ್ರತ್ ಪೈಗಂಬರ್(ಸ)ರ ಅತ್ಯಂತ ಬುದ್ಧಿವಂತ ಮಹಿಳೆ ಮತ್ತು ಪರಿಶುದ್ಧ ಪತ್ನಿಯಾದ ಹಝ್ರತ್ ಉಮ್ಮು ಸಲ್ಮಾ(ರ) ಡೇರೆಯ ಒಳಗಿನಿಂದ ಈ ದೃಶ್ಯಗಳನ್ನು ನೋಡುತ್ತಿದ್ದರು. ತನ್ನ ಆದರಣೀಯ ಪತಿ ಚಿಂತಿತರಾಗಿ ಒಳಗೆ ಬರುತ್ತಿರುವುದನ್ನು ಅವರು ನೋಡಿದರು. ಹಝ್ರತ್ ಪೈಗಂಬರ್(ಸ)ರ ಮುಖದಿಂದ ಅವರ ಚಿಂತೆ ಮತ್ತು ಕಳವಳವನ್ನು ಗೊತ್ತುಮಾಡಿಕೊಂಡು ಸಹಾನುಭೂತಿ ಮತ್ತು ಪ್ರೀತಿಯಿಂದ ಅವರು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನೀವು ದುಃಖಿಸಬೇಡಿರಿ. ನಿಮ್ಮ ಸಹಾಬಿಯರು ಅಲ್ಲಾಹನ ಅನುಗ್ರಹದಿಂದ ಅವಿಧೇಯರಲ್ಲ. ಆದರೆ ಈ ಒಪ್ಪಂದ ಶರತ್ತುಗಳು ಅವರನ್ನು ದುಃಖದಿಂದ ಹುಚ್ಚರಂತೆ ಮಾಡಿದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ನೀವು ಅವರೊಡನೆ ಏನೂ ಹೇಳಬೇಡಿರಿ. ಅದಕ್ಕೆ ಬದಲಾಗಿ ಮೌನವಾಗಿ ಹೊರಗೆ ಹೋಗಿ ತನ್ನ ಕುರ್ಬಾನಿಯ ಜಾನುವಾರನ್ನು ಕೊಯ್ಯಿರಿ ಮತ್ತು ತಮ್ಮ ತಲೆಗೂದಲನ್ನು ಕತ್ತರಿಸಿರಿ. ಆಗ ನಿಮ್ಮ ಸಹಾಬಿಯರು ಸ್ವತಃ ನಿಮ್ಮನ್ನು ಅನುಕರಿಸುವರು. ಹಝ್ರತ್ ಪೈಗಂಬರ್(ಸ)ರಿಗೆ ತನ್ನ ಪತ್ನಿಯ ಸಲಹೆ ಇಷ್ಟವಾಯಿತು ಮತ್ತು ಅವರು ಅದರಂತೆ ಮಾಡಿದರು.

ಈ ದೃಶ್ಯವನ್ನು ಕಂಡ ಸಹಾಬಗಳು ಶಬ್ದ ಕೇಳಿ ಮಲಗಿದ್ದ ವ್ಯಕ್ತಿ ಇದ್ದಕ್ಕಿದ್ದಂತೆ ಎಚ್ಚರಗೊಳ್ಳುತ್ತಿದ್ದಂತೆಯೇ ಅವರು ಗಾಬರಿಯಿಂದ ಎದ್ದು ಉನ್ಮಾದದಿಂದ ತಮ್ಮ ಪ್ರಾಣಿಗಳನ್ನು ವಧಿಸಲು ಪ್ರಾರಂಭಿಸಿದರು ಮತ್ತು ಪರಸ್ಪರ ತಲೆ ಮುಂಡಣ ಮಾಡಲು ಪ್ರಾರಂಭಿಸಿದರು. ಆದರೆ ದುಃಖವು ಅವರನ್ನು ಎಷ್ಟು ಚಂಚಲಗೊಳಿಸಿತು ಎಂದರೆ ಆ ಸಮಯದಲ್ಲಿ ಮುಸ್ಲಿಮರು ಪರಸ್ಪರ ಕೂದಲು ಬೋಳಿಸಿಕೊಳ್ಳುವಾಗ ಒಬ್ಬರ ಕತ್ತು ಕೊಯ್ದುಕೊಳ್ಳಬಹುದೆಂದು ಹೆದರುತ್ತಿದ್ದರು ಎಂದು ವರದಿಗಾರರು ಹೇಳುತ್ತಾರೆ.

ಆದಾಗ್ಯೂ, ಹಝ್ರತ್ ಉಮ್ಮೆ ಸಲಮಾ(ರ) ಅವರ ಸಲಹೆಯು ಪರಿಣಾಮಕಾರಿಯಾಯಿತು ಮತ್ತು ಹಝ್ರತ್ ಪೈಗಂಬರ್(ಸ) ರ ಅನುಗ್ರಹದಾಯಕ ಮಾತುಗಳು ತಾತ್ಕಾಲಿಕವಾಗಿ ವಿಫಲವಾದಾಗ, ಅವರ ಕಾರ್ಯಗಳು ಮಲಗಿದ್ದವರನ್ನು ಬೆಚ್ಚಿಬೀಳಿಸುವ ಮೂಲಕ ಎಚ್ಚರಗೊಳಿಸಿದವು.

(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ), ಎಂ.ಎ, ಪುಟ 769-770)

ಈ ಉಲ್ಲೇಖವು ಸೀರತ್ ಖಾತಮನ್ನಬಿಯೀನ್(ಸ) ನಿಂದ ಪ್ರಸ್ತುತಪಡಿಸಲಾಗಿದೆ.

ಹೀಗೆ ಹಝ್ರತ್ ಪೈಗಂಬರ್(ಸ)ರು ಹುದೈಬಿಯಾದಲ್ಲಿ ತಮ್ಮ ಖುರ್ಬಾನಿಯ ಒಂಟೆಯನ್ನು ವಧಿಸಿದಾಗ, ಖುರ್ಬಾನಿಯ ಪ್ರಾಣಿಗಳಲ್ಲಿ ಬದರ್ ಯುದ್ಧದಲ್ಲಿ ಯುದ್ಧ ಸಂಪತ್ತಿನಲ್ಲಿ ಲಭಿಸಿದ ಅಬು ಜಹಲ್‌ನ ಒಂದು ಒಂಟೆಯು ಇತ್ತು ಅದು ಮೇಯುತ್ತಿರುವಾಗ ಓಡಿಹೋಯಿತು. ಅದನ್ನು ಒಂಟಿಯಾಗಿ ಬಿಡಲಾಗಿತ್ತು ಮತ್ತು ಅದರ ಮೇಲೆ ಹಾರ ಹಾಕಲಾಗಿತ್ತು. ಅದನ್ನು ಸಂಕೇತವನ್ನಾಗಿ ಮಾಡಲಾಗಿತ್ತು. ಅದು ಸ್ವಲ್ಪ ಸಮಯದವರೆಗೆ ಓಡಿಹೋಗಿತ್ತು ಆದರೆ ಅಂತಿಮವಾಗಿ ಆ ಸಂದರ್ಭದಲ್ಲಿ ಸಿಕ್ಕಿಬಿಟ್ಟಿತು ಅದನ್ನು ಖುರ್ಬಾನಿಗಾಗಿ ತರಲಾಗಿತ್ತು. ಹಝ್ರತ್ ಪೈಗಂಬರ್(ಸ)ರು ಆ ಒಂಟೆಯನ್ನು ಏಳು ಪುರುಷರ ಪರವಾಗಿ ವಧಿಸಿದರು. ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ)ರು ಎಪ್ಪತ್ತು ಪ್ರಾಣಿಗಳನ್ನು ವಧಿಸಿದರು. ಒಂದು ಪ್ರಾಣಿ ಏಳು ಮನುಷ್ಯರಿಂದ ಮತ್ತು ನಾವು ಆ ದಿನ ಹದಿನಾಲ್ಕು ನೂರು ಜನರಿದ್ದೆವು. ಖುರ್ಬಾನಿ ಮಾಡದವರಿಗಿಂತ ಖುರ್ಬಾನಿ ಮಾಡದವರೇ ಹೆಚ್ಚಾಗಿದ್ದರು. ಅಷ್ಟು ಸಾಮರ್ಥ್ಯ ಅವರಿಗಿರಲಿಲ್ಲ.

ಹಝ್ರತ್ ಪೈಗಂಬರ್(ಸ) ಹರಮ್‌ನ ಹೊರಗೆ ವಾಸಿಸುತ್ತಿದ್ದರು, ಆದರೆ ಹರಮ್‌ನಲ್ಲಿ ನಮಾಝ್‌ಗಳನ್ನು ನಿರ್ವಹಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ)ರು ತಮ್ಮ ಖುರ್ಬಾನಿಯ ಜಾನುವಾರುಗಳಲ್ಲಿ ಇಪ್ಪತ್ತು ಅಸ್ಲಮ್ ಗೋತ್ರದ ಓರ್ವ ವ್ಯಕ್ತಿಗೆ ಮರ್ವಾಹ್ ಬಳಿ ಅವುಗಳನ್ನು ವಧಿಸಲು ಕಳುಹಿಸಿದರು. ಹಝ್ರತ್ ಪೈಗಂಬರ್(ಸ)ರು ಪ್ರಾಣಿಗಳನ್ನು ವಧೆ ಮಾಡಿ ಮುಗಿಸಿದಾಗ, ಅವರು ಡೇರೆಗೆ ತೆರಳಿ ಹಝ್ರತ್ ಖಿರಾಶ್ ಬಿನ್ ಉಮೈಯ(ರ) ಅವರನ್ನು ಕರೆದು ತಮ್ಮ ತಲೆ ಮುಂಡಣ ಮಾಡಿಕೊಂಡರು ಮತ್ತು ಕೂದಲನ್ನು ಒಂದು ಕಡೆ ಹಸಿರು ಮುಳ್ಳಿನ ಮರದ ಮೇಲೆ ಹಾಕಿದರು. ಜನರು ಮರದ ತುದಿಯಿಂದ ಕೂದಲನ್ನು ಎತ್ತಿಕೊಂಡು ತಮ್ಮತಮ್ಮಲ್ಲೇ ಹಂಚಲು ಆರಂಭಿಸಿದರು. ಹಝ್ರತ್ ಉಮ್ಮೆ ಉಮಾರಾ(ರ) ರವರು ಹಝ್ರತ್ ಪೈಗಂಬರ್(ಸ)ರ ಸ್ವಲ್ಪ ಕೂದಲನ್ನು ತೆಗೆದುಕೊಂಡರು. ಅವರು ರೋಗಿಗೆ ಅದನ್ನು ನೀರಿನಲ್ಲಿ ಹಾಕಿ ಚಿಕಿತ್ಸೆಗಾಗಿ ರೋಗಿಗೆ ನೀಡುತ್ತಿದ್ದರು. ಅವರು ಹೇಳುತ್ತಾರೆ, ಚಿಕಿತ್ಸೆ ಪಡೆದ ಕೆಲ ರೋಗಿಗಳು ಗುಣಮುಖರಾಗುತ್ತಿದ್ದರು. ಅದರಲ್ಲಿ ಅನುಗ್ರಹವಿತ್ತು. ಕೆಲವು ಸಹಾಬರುಗಳು ಪರಸ್ಪರ ತಲೆ ಮುಂಡಣೆ ಮಾಡಲು ಪ್ರಾರಂಭಿಸಿದರು. ಕೆಲವರು ತಮ್ಮ ಕೂದಲನ್ನು ಬೋಳಿಸಿಕೊಂಡರು ಮತ್ತು ಕೆಲವರು ಹಝ್ರತ್ ಉಸ್ಮಾನ್(ರ) ಮತ್ತು ಹಝ್ರತ್ ಅಬುಖತಾದಾ(ರ) ಸೇರಿದಂತೆ ತಮ್ಮ ಕೂದಲನ್ನು ಕತ್ತರಿಸಿದರು. ಹಝ್ರತ್ ಪೈಗಂಬರ್(ಸ)ರು ತಮ್ಮ ತಲೆಯನ್ನು ಡೇರೆಯಿಂದ ಹೊರತೆಗೆದರು ಮತ್ತು ಅವರು(ಸ) ಹೇಳುತ್ತಿದ್ದರು: ತಮ್ಮ ತಲೆ ಬೋಳಿಸುವವರಿಗೆ ಅಲ್ಲಾಹನು ಕರುಣಿಸಲಿ. ಹಝ್ರತ್ ಪೈಗಂಬರ್(ಸ) ಅವರನ್ನು ಕೇಳಲಾಯಿತು, ಯಾ ರಸೂಲಲ್ಲಾಹ್(ಸ)!! ಖಸರ್ (ಕಡಿಮೆ) ಮಾಡುವವರು. ಅಂದರೆ, ಕತ್ತರಿಸಿದವರು? ಹೀಗೆ ಹಝ್ರತ್ ಪೈಗಂಬರ್(ಸ) ಅವರು ಮೂರು ಬಾರಿ ಹೇಳಿದರು: ಸರ್ವಶಕ್ತನಾದ ಅಲ್ಲಾಹನು ತಮ್ಮ ತಲೆ ಬೋಳಿಸುವವರ ಮೇಲೆ ಕರುಣಿಸಲಿ, ಮತ್ತು ನಾಲ್ಕನೇ ಬಾರಿ ಅವರು(ಸ) ಹೇಳಿದರು: ಸರ್ವಶಕ್ತನಾದ ಅಲ್ಲಾಹನು ತಮ್ಮ ತಲೆಯ ಕೂದನ್ನು ಕತ್ತರಿಸುವವರ ಮೇಲೆಯೂ ಕರುಣಿಸಲಿ.

ಹಝ್ರತ್ ಪೈಗಂಬರ್(ಸ)ರು ಹತ್ತೊಂಬತ್ತು (19) ದಿನಗಳ ಕಾಲ ಹುದೈಬಿಯಾದಲ್ಲಿ ತಂಗಿದ್ದರು ಮತ್ತು ಅವರು ಇಪ್ಪತ್ತು (20) ರಾತ್ರಿಗಳ ಕಾಲ ಇದ್ದರು ಎಂದು ಹೇಳಲಾಗುತ್ತದೆ. ಮುಹಮ್ಮದ್ ಬಿನ್ ಉಮರ್ ವಾಕಿದಿ ಮತ್ತು ಇಬ್ನ್ ಸಅದ್ ಇದನ್ನು ಉಲ್ಲೇಖಿಸಿದ್ದಾರೆ.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-5, ಪುಟ-57, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಇದನ್ನು ಈ ಕೆಳಗಿನಂತೆ ವಿವರಿಸಿದ್ದಾರೆ: "ತ್ಯಾಗ ಇತ್ಯಾದಿಗಳನ್ನು ಮುಗಿಸಿದ ನಂತರ, ಹಝ್ರತ್ ಪೈಗಂಬರ್(ಸ)ರು ಮದೀನಾಗೆ ಮರಳಲು ಆದೇಶಿಸಿದರು. ಆಗ ನೀವು(ಸ) ಹುದೈಬಿಯಾಗೆ ಬಂದು ಇಪ್ಪತ್ತು ದಿನಗಳಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ಅವರು ತಮ್ಮ ಮರಳುವಿಕೆಯ ಪ್ರಯಾಣದಲ್ಲಿ ಉಸ್ಫಾನ್ ಬಳಿಯ ಕುರಾ'ಅಲ್-ಘಮೀಮ್‌ಗೆ ರಾತ್ರಿಯ ಹೊತ್ತು ತಲುಪಿದರು ಆದ್ದರಿಂದ ಅವರು ಘೋಷಣೆ ಮಾಡಿ ಎಲ್ಲಾ ಸಹಾಬಗಳನ್ನು ಒಟ್ಟುಗೂಡಿಸಿ ಹೇಳಿದರು ಇಂದು ರಾತ್ರಿ ನನಗೆ ಎಲ್ಲಕ್ಕಿಂತ ಹೆಚ್ಚು ಪ್ರಿಯವಾದ ಸೂರಾವನ್ನು ಬಹಿರಂಗಪಡಿಸಲಾಗಿದೆ. ಅದೇನೆಂದರೆ:

**ಇನ್ನಾ ಫತಹ್‌ನಾಲಕ ಫತ್‌ಹನ್ ಮುಬೀನಾ. ಲಿಯಗ್‌ಫಿರಲಕಲ್ಲಾಹು ಮಾ ತಖದ್ದಮ ಮಿನ್ ಝಂಬಿಕ ವಮಾ ತಅಖ್ಖರ ವ ಯುತಿಮ್ಮ ನಿಅ್‌ಮತಹೂ ಅಲೈಕ ವ ಯಹ್‌ದೀಯಕ ಸಿರಾತಮ್ಮುಸ್ತಖೀಮಾ. ವ ಯನ್‌ಸುರಕಲ್ಲಾಹು ನಸರನ್ ಅಝೀಝಾ........"** ಇವು ಸೂರಾ ಫತಹ್‌ನ ಎರಡರಿಂದ ನಾಲ್ಕು ಆಯತ್‌ಗಳಾಗಿವೆ. ನಂತರ ಇಪ್ಪತ್ತೆಂಟನೇ ಆಯತ್ ಕೂಡ ಇದರ ಬಗ್ಗೆ ಹೀಗಿದೆ: **ಲಖದ್ ಸದಖಲ್ಲಾಹು ರಸೂಲಹುರ್‌ರುಯಾ ಬಿಲ್‌ಹಖ್ಖಿ ಲತದ್‌ಖುಲುನ್ನಲ್ ಮಸ್ಜಿದಲ್ ಹರಾಮ ಇನ್‌ಶಾಅಲ್ಲಾಹು ಆಮಿನೀನ ಮುಹಲ್ಲಿಖೀನ ರುಊಸಕುಮ್ ವ ಮುಖಸ್ಸಿರೀನ ಲಾ ತಖಾಫೂನ** (ಅಲ್‌ಫತಹ್: 2 ರಿಂದ 4 ಮತ್ತು 28) ಅಂದರೆ: ನಿಜವಾಗಿಯೂ ನಾವು ನಿನಗೆ ವಿಜಯವನ್ನು ನೀಡಿರುವೆವು ಸ್ಪಷ್ಟವಾದೊಂದು ವಿಜಯ. ನಿನ್ನ ಹಿಂದಿನ ಮತ್ತು ಮುಂದಿನ ಕುಂದುಕೊರತೆಗಳನ್ನು ಅಲ್ಲಾಹನು ನಿನ್ನಿಂದ ಮರೆಮಾಚಲಿಕ್ಕೂ ನಿನ್ನ ಮೇಲೆ ಅವನ ಅನುಗ್ರಹಗಳನ್ನು ಪೂರ್ಣಗೊಳಿಸಲಿಕ್ಕೂ ನಿನ್ನನ್ನು ಸತ್ಪಥದಲ್ಲಿ ನಡೆಸಲಿಕ್ಕೂ; ಅಲ್ಲಾಹನು ನಿನಗೆ ಮಹತ್ವದ ಸಹಾಯದಿಂದ ನೆರವಾಗಲಿಕ್ಕೂ ಬೇಕಾಗಿ....... ಅಲ್ಲಾಹನಿಚ್ಛಿಸಿದರೆ ಖಂಡಿತವಾಗಿಯೂ ನೀವು ಶಾಂತಚಿತ್ತರಾಗಿಯೂ ತಲೆಮುಂಡನ ಮಾಡಿದ ಅಥವಾ ತಲೆಗೂದಲು ಕತ್ತರಿಸಿದ ಸ್ಥಿತಿಯಲ್ಲಿಯೂ ಪವಿತ್ರ ಮಸೀದಿಯನ್ನು ನಿರ್ಭಯವಾಗಿ ಪ್ರವೇಶಿಸುವಿರಿ ಎಂಬ ಆ ಸ್ವಪ್ನವನ್ನು ಅಲ್ಲಾಹನು ತನ್ನ ಸಂದೇಶವಾಹಕನಿಗೆ ಯಥಾ ಪ್ರಕಾರ ಈಡೇರಿಸಿಕೊಟ್ಟಿರುವನು. ನೀವು ತಿಳಿಯದಿದ್ದುದನ್ನು ಅವನು ತಿಳಿದಿರುವನು. ಹಾಗೆ ಅವನು ಅದಲ್ಲದೆ ಶೀಘ್ರದಲ್ಲೇ ಮತ್ತೊಂದು ವಿಜಯವನ್ನು ಸಹ ನಿಮಗೆ ಪ್ರದಾನ ಮಾಡಿದನು. ಆದ್ದರಿಂದ, ಒಪ್ಪಂದದ ಫಲವಾಗಿ ದೇವರು ಈ ವರ್ಷ ಶಾಂತಿಯ ಸ್ಥಿತಿಯನ್ನು ಸೃಷ್ಟಿಸಿದ್ದಾನೆ ಮತ್ತು ದೇವರು ತೋರಿಸಿದ ಕನಸಿನ ಪ್ರಕಾರ ಶೀಘ್ರದಲ್ಲೇ ನೀವು ಶಾಂತಿಯುತವಾಗಿ ಮಸ್ಜಿದೆ ಹರಾಮ್ ಅನ್ನು ಪ್ರವೇಶಿಸುತ್ತೀರಿ. ಆದ್ದರಿಂದ ಇದು ಹಾಗೆಯೇ ಸಂಭವಿಸಿತು.

ಹಝ್ರತ್ ಪೈಗಂಬರ್(ಸ) ಸಹಾಬಿಯರಿಗೆ ಈ ವಚನಗಳನ್ನು ಓದಿ ಹೇಳಿದರು. ಕೆಲವು ಸಹಾಬಿಯರ ಹೃದಯಗಳಲ್ಲಿ ಅಲ್ಲಿಯ ವರೆಗೂ ಹುದೈಬಿಯಾ ಸಂಧಿಯ ಕಹಿ ಅನುಭವ ಉಳಿದಿತ್ತು. ಆದ್ದರಿಂದ ಬಾಹ್ಯವಾಗಿ ನೋಡುವಾಗ ಪರಾಜಿತರಾಗಿ ಹೋಗುತ್ತಿರುವ ನಮಗೆ ಅಲ್ಲಾಹನು ವಿಜಯದ ಶುಭಾಶಯಗಳನ್ನು ಏಕೆ ನೀಡುತ್ತಿದ್ದಾನೆ ಎಂದು ಯೋಚಿಸಿ ಆಶ್ಚರ್ಯಗೊಂಡರು. ಎಲ್ಲಿಯ ವರೆಗೆ ಎಂದರೆ, ಕೆಲವರು ಹೀಗೆಯೂ ಹೇಳಿದರು: ನಾವು ಬೈತುಲ್ಲಾಹ್‌ದ ತವಾಫ್ ಮಾಡಲಾಗದೇ ಮರಳಿ ಹೋಗುತ್ತಿರುವುದು ವಿಜಯವೇ? ಹಝ್ರತ್ ಪೈಗಂಬರ್(ಸ)ರಿಗೆ ಈ ಮಾತು ಮುಟ್ಟಿದಾಗ ಅವರು ಬಹಳ ಅಸಂತುಷ್ಟಗೊಂಡರು ಮತ್ತು ಒಂದು ಸಂಕ್ಷಿಪ್ತವಾದ ಭಾಷಣದಲ್ಲಿ ಆವೇಶದೊಂದಿಗೆ ಹೀಗೆ ಹೇಳಿದರು: ಇದು ಬಹಳ ವ್ಯರ್ಥವಾದ ಆಕ್ಷೇಪವಾಗಿದೆ.

ಏಕೆಂದರೆ ಖುರೈಶಿಯರು ನಮ್ಮ ವಿರುದ್ಧ ಯುದ್ಧ ಮೈದಾನಕ್ಕೆ ಇಳಿದಿದ್ದರು. ಅವರು ಸ್ವತಃ ಯುದ್ಧವನ್ನು ಉಪೇಕ್ಷಿಸಿ ಶಾಂತಿಯ ಒಪ್ಪಂದವನ್ನು ಮಾಡಿರುವರು ಮತ್ತು ಮುಂದಿನ ವರ್ಷ ನಮಗಾಗಿ ಮಕ್ಕಾದ ಬಾಗಿಲುಗಳನ್ನು ತೆರೆಯುವುದಾಗಿ ವಾಗ್ದಾನ ಮಾಡಿರುವರು. ನಾವು ಶಾಂತಿ ಮತ್ತು ಸಮಾಧಾನದಿಂದ ಮಕ್ಕಾ ನಿವಾಸಿಗಳ ಪಿತೂರಿಗಳಿಂದ ಸುರಕ್ಷಿತರಾಗಿ ಮತ್ತು ಮುಂದಿನ ವಿಜಯಗಳ ಸುವಾಸನೆಯನ್ನು ಪಡೆಯುತ್ತಾ ಮರಳಿ ಹೋಗುತ್ತಿದ್ದೇವೆ. ಆದ್ದರಿಂದ ಇದು ಖಂಡಿತವಾಗಿಯೂ ಮಹತ್ತಾದ ವಿಜಯವಾಗಿದೆ. ಇದೇ ಖುರೈಶಿಯರು ಉಹುದ್ ಮತ್ತು ಅಹ್‌ಝಾಬಿನ ಯುದ್ಧಗಳಲ್ಲಿ ಯಾವ ರೀತಿಯಲ್ಲಿ ನಿಮ್ಮ ವಿರುದ್ಧ ದಾಳಿ ಮಾಡುತ್ತಾ ಬಂದಿದ್ದರು ಎಂಬುದನ್ನು ನೀವು ಮರೆತು ಬಿಟ್ಟಿರಾ? ಆಗ ಈ ಭೂಮಿ ವಿಸ್ತಾರವಾಗಿದ್ದೂ ನಿಮಗೆ ಇಕ್ಕಟ್ಟಾಗಿ ತೋರಿತ್ತು. ನಿಮ್ಮ ಕಣ್ಣುಗಳು ಆಯಾಸಗೊಂಡಿದ್ದುವು ಮತ್ತು ಯಕೃತ್ತು ಬಾಯಿಗೆ ಬಂದಿತ್ತು. ಆದರೆ ಅದೇ ಖುರೈಶಿಯರು ನಿಮ್ಮೊಂದಿಗೆ ಶಾಂತಿ ಮತ್ತು ಸಮಾಧಾನದಿಂದ ಒಪ್ಪಂದ ಮಾಡುತ್ತಿದ್ದಾರೆ. ಸಹಾಬಿಯರು ಹೇಳಿದರು: ಯಾ ರಸೂಲಲ್ಲಾಹ್,

ನಮಗೆ ಗೊತ್ತಾಯಿತು, ನಮಗೆ ಮನವರಿಕೆಯಾಯಿತು. ನಿಮ್ಮ ದೃಷ್ಟಿ ತಲಪಿರುವ ತನಕ ನಮ್ಮ ದೃಷ್ಟಿಗಳು ತಲಪುತ್ತಿಲ್ಲ."
(ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–770–772)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹುದೈಬಿಯಾದ ಘಟನೆಯನ್ನು ಅಲ್ಲಾಹನು ಸ್ಪಷ್ಟವಾದ ವಿಜಯವೆಂದು **PàgÉi ÄÄv ÁÛಇನ್ನಾ ಫತಹ್‌ನಾ ಲಕ ಫತ್‌ಹಮ್ಮುಬೀನಾ** ಎಂದು ಹೇಳಿದ್ದಾನೆ. ಈ ವಿಜಯ ಏನೆಂದು ಹೆಚ್ಚಿನ ಸಹಾಬಿಯರಿಗೆ ಸಹ ಗೊತ್ತಿರಲಿಲ್ಲ. ಇದು ಕೆಲವು ಕಪಟವಿಶ್ವಾಸಿಗಳ ಧರ್ಮತ್ಯಾಗಕ್ಕೆ ಕಾರಣವಾಯಿತು. ಅದರ ವಿಷಯಗಳು ವಿಚಾರಪೂರ್ಣ ಮತ್ತು ಸೂಕ್ಷ್ಮವಾಗಿತ್ತಾದರೂ ಅದು ಸ್ಪಷ್ಟವಾದ ವಿಜಯವಾಗಿತ್ತು." (ಅನ್ವಾರುಲ್ ಇಸ್ಲಾಮ್, ರೂಹಾನಿ ಖಝಾಇನ್, ಸಂಪುಟ–9, ಪುಟ–90)

ಅಲ್ಲಾಮ ಬಿಲಾಧರಿ(ರಹ್ಮಹುಲ್ಲಾಹ್) ಹೀಗೆ ಬರೆದಿರುವರು: ಸಂಧಿಯ ಅನೇಕ ಉತ್ತಮ ಪರಿಣಾಮಗಳು ಮತ್ತು ಫಲಿತಾಂಶಗಳು ಪ್ರಕಟಗೊಂಡುವು. ಕೊನೆಗೆ ಮಕ್ಕಾವಿಜಯ ಉಂಟಾಯಿತು. ಮಕ್ಕಾದ ಎಲ್ಲರೂ ಇಸ್ಲಾಂ ಧರ್ಮದಲ್ಲಿ ಪ್ರವೇಶಿಸಿದರು. ಜನರು ಗುಂಪು ಗುಂಪಾಗಿ ಇಸ್ಲಾಮಿನಲ್ಲಿ ಪ್ರವೇಶಿಸಲು ತೊಡಗಿದರು. ಇದಕ್ಕೆ ಕಾರಣ, ಈ ಸಮನ್ವಯಕ್ಕೆ ಮೊದಲು, ಜನರು ಪರಸ್ಪರ ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ, ಅಥವಾ ಅವರ ಮುಂದೆ ಹಝ್ರತ್ ಪೈಗಂಬರ್(ಸ)ರ ವಿಷಯವೂ ಸ್ಪಷ್ಟಗೊಂಡಿರಲಿಲ್ಲ. ಅವರ ಪರಿಸ್ಥಿತಿಯನ್ನು ವಿವರವಾಗಿ ಹೇಳುವ ಅಂತಹ ವ್ಯಕ್ತಿ ಬರುತ್ತಿರಲಿಲ್ಲ.

ಹುದೈಬಿಯಾ ಸಂಧಿಯಾದಾಗ ಜನರು ಪರಸ್ಪರ ಭೇಟಿಯಾದರು. ಮುಶ್ರಿಕೀನರು ಮದೀನಾಗೆ ಬಂದರು. ಮುಸ್ಲಿಮರು ಮಕ್ಕಾಗೆ ಹೋದರು. ಅವರು ತಮ್ಮ ಕುಟುಂಬ ಸ್ನೇಹಿತರು ಮತ್ತು ಹಿತೈಷಿಗಳನ್ನು ಭೇಟಿಯಾದರು. ಅವರಿಂದ ಹಝ್ರತ್ ಪೈಗಂಬರ್(ಸ)ರ ಮಾತುಗಳು ಮತ್ತು ಪವಾಡಗಳನ್ನು ಆಲಿಸಿದರು. ನಬುವ್ವತ್ತಿನ ಚಿಹ್ನೆಗಳನ್ನು ತಿಳಿದುಕೊಂಡರು. ನಿಮ್ಮ ಉತ್ತಮ ಗುಣ ಮತ್ತು ಒಳ್ಳೆಯ ನಡತೆಯ ಬಗ್ಗೆ ಅರಿವಾಯಿತು. ಅನೇಕ ವಿಷಯಗಳನ್ನು ಪರಿಶೀಲಿಸಿದ ನಂತರ, ಅವರ ಆತ್ಮಗಳು ಈಮಾನ್‌ನ ಕಡೆಗೆ ಒಲವು ತೋರಿದವು, ಅನೇಕ ಜನರು ನಂಬಲು ತ್ವರೆಗೊಂಡರು ಮತ್ತು ಹುದೈಬಿಯಾ ಸಂಧಿ ಮತ್ತು ಮಕ್ಕಾ ವಿಜಯದ ನಡುವೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿಕೊಂಡರು. ಇತರರು ಮಕ್ಕಾ ದಿನದಂದು ಸತ್ಯವಿಶ್ವಾಸಿಗಳು ಇಸ್ಲಾಂ ಧರ್ಮದ ಕಡೆಗೆ ಒಲವು ತೋರುತ್ತಿದ್ದರು. ಅರಬ್ಬಿನ ಖುರೈಷಿಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಕಾಯುತ್ತಿದ್ದರು. ಖುರೈಷಿಗಳು ವಿಶ್ವಾಸ ತಂದಾಗ ಎಲ್ಲಾ ಅರಬ್ಬರು ವಿಶ್ವಾಸ ತಂದರು.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–5, ಪುಟ–80, ದಾರುಲ್ ಕುತುಬ್ ಇಲ್ಮಿಯಾ, ಬೈರುತ್)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹುದೈಬಿಯಾ ಸಂಧಿಯ ಅನುಗ್ರಹೀತ ಫಲಗಳಲ್ಲಿ ಒಂದೇನೆಂದರೆ, ಜನರಿಗೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಲು ಅವಕಾಶ ಲಭಿಸಿತು. ಅವರು ಹಝ್ರತ್ ಪೈಗಂಬರ್(ಸ)ರ ಮಾತನ್ನು ಆಲಿಸಿದಾಗ ಅವರಲ್ಲಿ ನೂರಾರು ಜನರು ಮುಸ್ಲಿಮರಾದರು. ಎಲ್ಲಿಯವರೆಗೆ ಅವರು ಹಝ್ರತ್ ಪೈಗಂಬರ್(ಸ)ರ ಮಾತುಗಳನ್ನು ಕೇಳಲಿಲ್ಲವೋ ಅಲ್ಲಿಯವರೆಗೆ, ಅವರ ಮತ್ತು ಹಝ್ರತ್ ಪೈಗಂಬರ್(ಸ)ರ ನಡುವೆ ಗೋಡೆಯಿತ್ತು, ಅದು ಅವರಿಗೆ ಸೌಂದರ್ಯದ ಬಗ್ಗೆ ತಿಳಿಸಲು ಅವಕಾಶ ನೀಡುತ್ತಿರಲಿಲ್ಲ. ಮತ್ತೊಂದೆಡೆ ಅನ್ಯ ಜನರು ಅವರಿಗೆ ಸುಳ್ಳುಗಾರ ಎಂದು ಹೇಳುತ್ತಿದ್ದರು (ನೌಝುಬಿಲ್ಲಾಹ್) ಅವರು ಸಹ ಹಝ್ರತ್ ಪೈಗಂಬರ್(ಸ)ರ ಅನುಗ್ರಹದಿಂದ ವಂಚಿತರಾಗಿದ್ದರು. ಆದರೆ ಆ ಗೋಡೆ ಪರದೆಯು ತೆರೆಯಲ್ಪಟ್ಟಾಗ ಮತ್ತು ಅವರೆಲ್ಲರು ಅವರ(ಸ) ಹತ್ತಿರ ಬಂದಾಗ ಅವರನ್ನು ನೋಡಲು ಮತ್ತು ಆಲಿಸಲು ಪ್ರಾರಂಭಿಸಿದಾಗ ಅವನು ಇನ್ನು ಮುಂದೆ ವಂಚಿತರಾಗಲಿಲ್ಲ ಮತ್ತು ಅವರು ಪವಿತ್ರಾತ್ಮಗಳ ಗುಂಪಿಗೆ ಪ್ರವೇಶಿಸಿದರು.

(ಮಲ್‌ಫೂಝಾತ್, ಸಂಪುಟ–5, ಪುಟ–371, ಆವೃತ್ತಿ 2022)

ಉಳಿದ ಭಾಗವನ್ನು ಮುಂದಿನ ಬಾರಿ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

––––––––––––*****––––––––––––

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಗೌರವಾನ್ವಿತ ಯಾಸಿರ್ ಅಹ್ಮದ್ ನಾಯಕ್ ಸಾಹಿಬ್ರು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕವನ ಸಂಕಲದಿಂದ "ಹಮೇ ಉಸ್ ಯಾರ್ ಕೊ ತಖ್ವಾ ಅತಾ ಹೈ" ಕವನವನ್ನು ಪಠಿಸಿದರು.

ಈ ಅಧಿವೇಶನದ ಮೊದಲ ಭಾಷಣವನ್ನು ಮಾನ್ಯ ಕೆ ತಾರಿಖ್ ಅಹ್ಮದ್ ಸಾಹಿಬ್ ಎಡೀಷನಲ್ ನಾಝಿರ್ ಅಸ್ಲಾಹ್ ವ ಇರ್ಷಾದ್ ನೂರುಲ್ ಇಸ್ಲಾಮ್ ಖಾದಿಯಾನ್ ಅವರು "ವಿಶ್ವ ಯುದ್ಧದ ದುಷ್ಪರಿಣಾಮಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರ ಸೂಚನೆಗಳು" ಎಂಬ ವಿಷಯದ ಕುರಿತು ಮಾಡಿದರು. ಅವರು ಈ ಭಾಷಣವನ್ನು ಪವಿತ್ರ ಖುರ್‌ಆನ್‌ನ ಸೂರಾ ಬನಿ ಇಸ್ರಾಈಲ್‌ನ 16 ನೇ ವಚನವನ್ನು ಓದಿ ಅದರ ಅನುವಾದವನ್ನು ತಿಳಿಸಿದ ನಂತರ ಭವಿಷ್ಯವಾಣಿಗಳ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಎರಡು ಉಲ್ಲೇಖಗಳನ್ನು ಪ್ರಸ್ತುತಪಡಿಸಿದರು.

ಗಣ್ಯ ಭಾಷಣಗಾರರು ಹೇಳಿದರು: "ಇಂದಿನ ಯುಗದಲ್ಲಿ ಪ್ರತಿಯೊಬ್ಬ ಮನುಷ್ಯನೂ ಅಭದ್ರತೆಯಿಂದ ಬಳಲುತ್ತಿದ್ದಾನೆ ಮತ್ತು ಶಾಂತಿ ಮತ್ತು ಸಾಮರಸ್ಯದ ಉಲ್ಲಂಘನೆಯನ್ನು ತನ್ನ ಕಣ್ಣುಗಳಿಂದ ನೋಡುತ್ತಿದ್ದಾನೆ ಮತ್ತು ತನ್ನ ಕಿವಿಗಳಿಂದ ಕೇಳುತ್ತಿದ್ದಾನೆ. ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ಯುದ್ಧದ ಜ್ವಾಲೆಗಳು ಭುಗಿಲೆದ್ದಿವೆ. ನಮ್ಮ ಕಾಲದಲ್ಲಿ, ದೇವರ ಕೋಪದ ಅಭಿವ್ಯಕ್ತಿಯು ಮತ್ತೊಂದು ಮಹಾಯುದ್ಧದ ರೂಪದಲ್ಲಿ ಪ್ರಕಟವಾಗಬಹುದು. ಅಂತಹ ಯುದ್ಧದ ದುಷ್ಪರಿಣಾಮಗಳು ಮತ್ತು ವಿನಾಶವು ಸಾಂಪ್ರದಾಯಿಕ ಯುದ್ಧಕ್ಕೆ ಅಥವಾ ಇಂದಿನ ಪೀಳಿಗೆಗೆ ಮಾತ್ರ ಸೀಮಿತವಾಗಿರುವುದಿಲ್ಲ ಎಂಬುದರಲ್ಲಿ ಸಂದೇಹವಿಲ್ಲ. ವಾಸ್ತವವಾಗಿ, ಇದರ ಭಯಾನಕ ಪರಿಣಾಮಗಳು ಮುಂಬರುವ ಹಲವು ಪೀಳಿಗೆಗೆ ಸ್ಪಷ್ಟವಾಗಿ ಕಂಡುಬರುತ್ತಲೇ ಇರುತ್ತವೆ. ಅಂತಿಮ ಕಾಲಘಟ್ಟದ ಇಮಾಮರಾದ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಜೀವನಪರ್ಯಂತ ಮುಸಲ್ಮಾನರಿಗೂ ಮತ್ತು ಇಡೀ ಲೋಕಕ್ಕೆ ಪದೇ ಪದೇ ಮುನ್ನೆಚ್ಚರಿಕೆಯನ್ನು ನೀಡಿದ್ದಾರೆ. ನೀವು ಪಶ್ಚಾತ್ತಾಪಪಡದಿದ್ದರೆ ಮತ್ತು ನೈಜ ದೇವನ ಮೇಲೆ ಹಾಗೂ ಅವರ ಪ್ರವಾದಿ ಮುಹಮ್ಮದ್(ಸ) ಮತ್ತು ಕಾಲಘಟ್ಟದ ಇಮಾಮರ ಮೇಲೆ ನಂಬಿಕೆ ತರದಿದ್ದರೆ ಅಲ್ಲಾಹನ ಘೋರವಾದ ಶಿಕ್ಷೆಗೆ ಗುರಿಪಡಿಸುವನು. ಈ ಯುಗದ ನಕ್ಷೆಯನ್ನು ಚಿತ್ರಿಸುತ್ತಾ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಈ ದೇಶದ ಪಾಳಿಯು ಹತ್ತಿರವಾಗುತ್ತಿದೆ ಎಂದು ನಾನು ನಿಜವಾಗಿ ಹೇಳುತ್ತೇನೆ. ನೋಹನ ಸಮಯವು ನಿಮ್ಮ ಕಣ್ಣುಗಳ ಮುಂದೆ ಬರುವುದು. ಲೂತ್‌ನ ಘಟನೆಗಳನ್ನು ನಿಮ್ಮ ಸ್ವಂತ ಕಣ್ಣುಗಳಿಂದ ನೋಡುವಿರಿ, ಅದರೆ ದೇವನು ಕೋಪಗೊಳ್ಳಲು ನಿಧಾನ ಪ್ರವೃತ್ತಿ ಹೊಂದಿದವನಾಗಿದ್ದಾನೆ, ಪಶ್ಚಾತ್ತಾಪಪಡಿರಿ, ಕರುಣೆಗೆ ಪಾತ್ರರಾಗುವಿರಿ, ದೇವರನ್ನು ತ್ಯಜಿಸುವವನು ಒಂದು ಹುಳು ಹೊರತು ಮನುಷ್ಯನಲ್ಲ, ಅವನಿಗೆ ಭಯಪಡದವನು ಮೃತ ಹೊರತು ಜೀವಂತನಲ್ಲ." (ಹಖೀಖತುಲ್ ವಹಿ, ರೂಹಾನಿ ಖಝಾಇನ್, ಸಂಪುಟ–22, ಪುಟ–289)

ಅವರು ಹೇಳಿದರು: ಸರ್ವಶಕ್ತನಾದ ಅಲ್ಲಾಹನ ಕಡೆಗೆ ತಿರುಗಿ ಆತನನ್ನು ತನ್ನ ಸಹಾಯಕ ಮತ್ತು ಬೆಂಬಲಿಗನನ್ನಾಗಿ ಮಾಡಿಕೊಳ್ಳುವುದನ್ನು ಹೊರತುಪಡಿಸಿ, ಮೂರನೇ ಮಹಾಯುದ್ಧದ ದುಷ್ಪರಿಣಾಮಗಳಿಂದ ಮನುಷ್ಯನಿಗೆ ತಪ್ಪಿಸಿಕೊಳ್ಳಲು ಬೇರೆ ದಾರಿಯಿಲ್ಲ. ಕಳೆದ ಎರಡು ದಶಕಗಳಿಂದ, ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರು ಮೂರನೇ ಮಹಾಯುದ್ಧದ ಅಪಾಯಗಳ ಬಗ್ಗೆ ಜಗತ್ತಿಗೆ ಎಚ್ಚರಿಕೆ ನೀಡುತ್ತಿದ್ದಾರೆ ಮತ್ತು ಈ ಜಾಗತಿಕ ದುರಂತದ ಭೀಕರತೆಯನ್ನು ತಪ್ಪಿಸಲು ಜಮಾಅತ್ ಸದಸ್ಯರು ದುಆಗಳ ಜೊತೆಗೆ ತಮ್ಮ ಕರ್ಮ ಸುಧಾರಣೆ ಮತ್ತು ತರಬೇತಿಯ ಕಡೆಗೆ ವಿಶೇಷ ಗಮನ ಹರಿಸುವಂತೆ ನಿರ್ದೇಶಿಸುತ್ತಿದ್ದಾರೆ. ಗಣ್ಯ ಭಾಷಣಗಾರರು ಈ ನಿಟ್ಟಿನಲ್ಲಿ ಹುಝೂರ್ ಅನ್ವರ್(ಅತಬಿಅ) ಅವರ ಹಲವಾರು ಉಪದೇಶಗಳನ್ನು ಮಂಡಿಸಿದರು. ಮತ್ತು ಅಂತಿಮವಾಗಿ, ಅವರು ಈ ಕೆಳಗಿನ ಉಲ್ಲೇಖಗಳನ್ನು ನೀಡುವ ಮೂಲಕ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಹುಝೂರ್ ಅನ್ವರ್(ಅತಬಿಅ) ಹೇಳುತ್ತಾರೆ:

"ಲೋಕವು ಅತ್ಯಂತ ಭೀಕರ ವಿನಾಶದ ಕಡೆ ವೇಗವಾಗಿ ಹೋಗುತ್ತಿದೆ. ಮುಸಲ್ಮಾನರಲ್ಲೂ ನ್ಯಾಯ ಉಳಿಯಲಿಲ್ಲ, ಮುಸ್ಲಿಮೇತರರಲ್ಲೂ ನ್ಯಾಯ ಉಳಿಯಲಿಲ್ಲ, ಕೇವಲ ನ್ಯಾಯ ಮಾತ್ರವಲ್ಲ, ಬದಲು ಹಿಂಸೆಯ ಮಿತಿಮೀರಿ ಬೆಳೆಯುತ್ತಿದೆ. ಆದ್ದರಿಂದ ಇಂತಹ ಸಮಯದಲ್ಲಿ ಲೋಕಕ್ಕೆ ತಮ್ಮ ಕಣ್ಣುಗಳನ್ನು ತೆರೆಯುವ ಮತ್ತು ಹಿಂಸೆಯಿಂದ ದೂರವಾಗುವ ಬಗ್ಗೆ ಗಮನ ಸೆಳೆದು ವಿನಾಶದ ರೂಪದಲ್ಲಿ ಬೀಳುವುದರಿಂದ ರಕ್ಷಿಸುವ ಪಾತ್ರ ಕೇವಲ ಅಹ್ಮದಿಯಾ ಜಮಾಅತ್ ನಿರ್ವಹಿಸಬಲ್ಲದು. ಅದಕ್ಕಾಗಿ ನಮ್ಮ ಪೈಕಿ ಎಲ್ಲರಿಗೂ ಎಲ್ಲಿ ತಮ್ಮ ತಮ್ಮ ನೆಲೆಯಲ್ಲಿ ತಮ್ಮ ನಡತೆಗಳಿಂದ ಪ್ರಯತ್ನಪಡಬೇಕಾಗಿದೆ, ಅಲ್ಲಿ ದರ ಜೊತೆಯಲ್ಲೇ ನಮಗೆ ಪ್ರಾರ್ಥನೆಯ ಕಡೆಗೂ ಹೆಚ್ಚು ಗಮನಹರಿಸುವ ಅಗತ್ಯವಿದೆ. ಮುಸಲ್ಮಾನ ರಾಷ್ಟ್ರಗಳ ಅನ್ಯಾಯಗಳು ಮತ್ತು ಅವರ ಪಾಪಕೃತ್ಯಗಳು ಅವರನ್ನು ಆಂತರಿಕವಾಗಿ ಛಿನ್ನಭಿನ್ನವಾಗಿಸಿಬಿಟ್ಟಿದೆ. ಅಂತೆಯೇ ಬಾಹ್ಯ ಅಪಾಯಗಳು ಸಹ

ಬಹುವೇಗವಾಗಿ ಅವರ ಮೇಲೆ ತೂರಾಡುತ್ತಿವೆ. ಅವರ ಬಾಗಿಲುವರೆಗೆ ತಲುಪಿದೆ ಎಂದರು ತಪ್ಪಾಗಲಿಕ್ಕಿಲ್ಲ. ಭೀಕರ ಯುದ್ಧವು ಬಾಯಿ ತೆರೆದು ನಿಂತಿದೆ, ಲೋಕವು ಅದರ ಪರಿಣಾಮಗಳಿಂದ ತಿಳಿಯದೆ ಇದೆ ಎಂಬುದೇನಿಲ್ಲ, ಆದರೆ ಅದರಿಂದ ಉಪೇಕ್ಷೆಯಲ್ಲಿರುವುದು ನಿಜ ಆದ್ದರಿಂದ ಇಂತಹ ಸ್ಥಿತಿಯನ್ನು ಮಸೀಹ್ ಮುಹಮ್ಮದಿಯರ ಗುಲಾಮರಾದ ನಾವು ತನ್ನ ಪಾತ್ರವನ್ನು ನಿರ್ವಹಿಸುತ್ತಾ ಲೋಕವನ್ನು ವಿನಾಶದಿಂದ ರಕ್ಷಿಸಲು ಪ್ರಾರ್ಥನೆಗಳ ಹಕ್ಕು ಪಾಲಿಸುವ ಅಗತ್ಯ ಬಹಳಷ್ಟಿದೆ. ಸರ್ವಶಕ್ತನಾದ ಲಲಾಹನು ನಮಗೆ ಈ ಹಕ್ಕನ್ನು ಪಾಲಿಸುವ ಭಾಗ್ಯ ದಯಪಾಲಿಸಲಿ ಮತ್ತು ಲೋಕವನ್ನು ವಿನಾಶದಿಂದ ರಕ್ಷಿಸುವಂತಾಗಲಿ. ಆಮೀನ್."

(ಅಲ್-ಫಝಲ್ ಇಂಟರ್ನ್ಯಾಷನಲ್, ಮೇ 17, 2013, ಪುಟ-7)

ಅಧಿವೇಶನದ ಎರಡನೇ ಭಾಷಣವನ್ನು ಮಾನ್ಯ ಮುಝಫ್ಫರ್ ಅಹ್ಮದ್ ನಾಸಿರ್ ಸಾಹಿಬ್ ನಾಝಿರ್ ಇಸ್ಲಾಹ್ ವ ಇರ್ಷಾದ್ ಮರ್ಕಝಿಯಾ ಖಾದಿಯಾನ್ ಅವರು "ಖಲೀಫರ ಸ್ಥಾನವಾನ ಖಿಲಾಫತ್‌ನ ಅನುಸರಣೆ ಮತ್ತು ನಿಷ್ಠೆಯ ಪ್ರಾಮುಖ್ಯತೆ ಹಾಗೂ ಅನುಗ್ರಹಗಳು" ಎಂಬ ವಿಷಯದ ಕುರಿತು ಮಾಡಿದರು. ಅವರು ಸೂರಾ ಆನ್-ನೂರ್‌ನ 56 ನೇ ವಚನವನ್ನು ಪಠಿಸಿ ಅದರ ಅನುವಾದವನ್ನು ಪ್ರಸ್ತುತಪಡಿಸಿದರು. ನಂತರ, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಯ ಬೆಳಕಿನಲ್ಲಿ ಖಲೀಫತ್‌ನ ಅರ್ಥವನ್ನು ವಿವರಿಸಿದರು.

ವ್ಯವಸ್ಥೆಯೊಂದಿಗೆ ಸಂಪರ್ಕದಲ್ಲಿರುವುದರ ಮಹತ್ವದ ಕುರಿತು ಗಣ್ಯ ಭಾಷಣಕಾರರು ಈ ಕೆಳಗಿನ ಹದೀಸ್ ಅನ್ನು ವಿವರಿಸಿದರು: ಹಝ್ರತ್ ಇಬ್ನು ಅಬ್ಬಾಸ್ (ರ) ವರದಿ ಮಾಡುತ್ತಾರೆ, ಪವಿತ್ರ ಪ್ರವಾದಿ(ಸ)ರವರು ನುಡಿದರು: ಯಾರು ತನ್ನ ಆಡಳಿತಗಾರನಿಂದ ಅಹಿತಕರವಾದದ್ದನ್ನು ನೋಡುತ್ತಾನೋ, ಅವನು ತಾಳ್ಮೆ ವಹಿಸಬೇಕು, ಏಕೆಂದರೆ ವ್ಯವಸ್ಥೆಯಿಂದ ಸಂಪೂರ್ಣವಾಗಿ ಬೇರ್ಪಟ್ಟವನ ಮರಣವು ಅಜ್ಞಾನದ ಮರಣವಾಗಿರುತ್ತದೆ.

ವಿಧೇಯತೆಗೆ ಸಂಬಂಧಿಸಿದಂತೆ ಅವರು ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ.ಅ) ಮತ್ತು ಹಝ್ರತ್ ಖಾಲಿದ್ ಬಿನ್ ವಲೀದ್(ರ.ಅ) ರವರ ಉದಾಹರಣೆಗಳನ್ನು ನೀಡಿದರು. ಅವರು ಹೇಳಿದರು: ಈ ಅಂತಿಮ ಕಾಲಘಟ್ಟದಲ್ಲಿಯೂ ಸಹ, ಹಝ್ರತ್ ಪೈಗಂಬರ್(ಸ) ರ ನಿಜವಾದ ಸೇವಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ವಿಧೇಯತೆಯ ಮಹಾನ್ ಉದಾಹರಣೆಗಳು ಇವೆ. ಅದರಿಂದಾಗಿ ಮೊದಲ ಯುಗದ ನೆನಪುಗಳನ್ನು ಪುನರುಜ್ಜೀವಗೊಳ್ಳುತ್ತದೆ. ಈ ನಿಟ್ಟಿನಲ್ಲಿ, ಗೌರವಾನ್ವಿತ ಭಾಷಣಕಾರರು ಹಝ್ರತ್ ಮಿಯಾಂ ಕರೀಮ್ ಬಕ್ಷ್ ಸಾಹಿಬ್ ಅವರ ಘಟನೆಯನ್ನು ವಿವರಿಸಿದರು, ಐದನೇ ಖಿಲಾಫತ್‌ನ ಚುನಾವಣೆಯ ಸಂದರ್ಭದಲ್ಲಿ ಒಂದೇ ಧ್ವನಿಗೆ ಎಲ್ಲಾ ಜನರು ಒಂದೇ ಕ್ರಮದಲ್ಲಿ ಕುಳಿತಿದ್ದ ಘಟನೆ, ಮತ್ತು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಅವರ ಸಲಹೆಯ ಮೇರೆಗೆ ಹಝ್ರತ್ ಅಬು ಅಬ್ದುಲ್ಲಾ ಸಾಹಿಬ್ 65 ನೇ ವಯಸ್ಸಿನಲ್ಲಿ ಪವಿತ್ರ ಖುರ್‌ಆನ್ ಅನ್ನು ಕಂಠಪಾಠ ಮಾಡಿದ ಘಟನೆಯನ್ನು ಪ್ರಸ್ತುತಪಡಿಸಿದರು. ಅವರು ಹೇಳಿದರು: ಖಿಲಾಫತ್ ವಿಧೇಯತೆ ಮತ್ತು ಸಂಘಟನೆಯ ವಿಧೇಯತೆ ಒಂದೇ ನಾಣ್ಯದ ಎರಡು ಬದಿಗಳಿದ್ದಂತೆ. ಅದು ಪ್ರತ್ಯೇಕ ಮಾಡಲು ಸಾಧ್ಯವಿಲ್ಲ. ಈ ಸಂಬಂಧ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ಸಂಘಟನೆಯ ವಿಧೇಯತೆಯ ಬಗ್ಗೆ ಹೇಳುತ್ತಾರೆ: ನಿಮ್ಮ ಧ್ಯೇಯೋದ್ದೇಶ, ನಿಮ್ಮ ಜೀವನದ ಗುರಿ ಕೇವಲ ಅಲ್ಲಾಹನ ಸಂತೋಷವಾಗಿರಬೇಕು ಎಂಬುದನ್ನು ಯಾವಾಗಲೂ ನೆನಪಿಡಿ. ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಮತ್ತು ಈ ಸಂಘಟನೆಯ ನೀತಿ ನಿಯಮಗಳೇನಿವೆ ಅದನ್ನು ತಪ್ಪದೆ ಪಾಲಿಸಬೇಕಾಗಿದೆ. ಇದರಲ್ಲಿ ಕಿಂಚಿತ್ತೂ ಲೋಪ ಬರಬಾರದು." (ಖುತ್‌ಬ ಜುಮುಅ, 27 ಆಗಸ್ಟ್ 2004)

ಗಣ್ಯ ಭಾಷಣಗಾರರು ಖಲೀಫರ ಮೇಲಿನ ಪ್ರೀತಿ ಮತ್ತು ವಾತ್ಸಲ್ಯದ ಕೆಲವು ಘಟನೆಗಳನ್ನು ಹೇಳಿದ ನಂತರ ತಮ್ಮ ಭಾಷಣವನ್ನು ಈ ಮಾತುಗಳೊಂದಿಗೆ ಮುಕ್ತಾಯಗೊಳಿಸಿದರು: ಅಲ್ಲಾಹನು ಪ್ರತಿಯೊಬ್ಬ ಅಹ್ಮದಿ ಪುರುಷ, ಮಹಿಳೆಯರಿಗೂ ಈ ಪ್ರತಿಜ್ಞೆಯನ್ನು ಪೂರೈಸುವಂತೆ ಮಾಡಲಿ. ಖಿಲಾಫತ್‌ಗೆ ನಿಷ್ಠೆ ಪ್ರೀತಿಯಲ್ಲಿ ಉನ್ನತ ಗುಣಮಟ್ಟವನ್ನು ಸಾಧಿಸುವಂತೆ ಮಾಡಲಿ. ಅಲ್ಲಾಹನು ನಮ್ಮನ್ನು ಯಾವಾಗಲೂ ಖಿಲಾಫತ್‌ನೊಂದಿಗೆ ಸಂಪರ್ಕಿಸಲಿ , ಮತ್ತು ತಮ್ಮ ಪ್ರೀತಿ ಪಾತ್ರರ ಪ್ರೀತಿಯನ್ನು ನಮಗೆ ದಯಪಾಲಿಸಲಿ. ಆಮೀನ್ ಸುಮ್ಮ ಆಮೀನ್.

ಅಧಿವೇಶನದ ಮೂರನೇ ಭಾಷಣವನ್ನು ಮಾನ್ಯ ರಫೀಖ್ ಅಹ್ಮದ ಬೇಗ್ ಸಾಹಿಬ್ ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್ ಅವರು "ಆರ್ಥಿಕ ತ್ಯಾಗದ ವಿಷಯದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಸದಸ್ಯರ ಅನುಕರಣೀಯ ಉದಾಹರಣೆಗಳು ಮತ್ತು ದೈವಾನುಗ್ರಹಗಳು" ಎಂಬ ವಿಷಯದ ಕುರಿತು ಮಾಡಿದರು. ಅವರು ಆರಂಭದಲ್ಲಿ **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ** (ಆಲಿ ಇಮ್ರಾನ್: 93) ವಚನವನ್ನು ಪ್ರಸ್ತುತಪಡಿಸಿದ ನಂತರ ಅದರ ಅನುವಾದವನ್ನು ಪ್ರಸ್ತುತಪಡಿಸಿದರು. ಅಂದರೆ: ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ನಿಮಗೆ ಪ್ರಿಯವಾದವುಗಳಿಂದ (ದೇವ ಮಾರ್ಗದಲ್ಲಿ) ವ್ಯಯಿಸುವ ವರೆಗೆ ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲನು.

ಅವರು ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಈ ಯುಗದಲ್ಲಿ ಖಿಲಾಫತೆ ಅಹ್ಮದಿಯಾದ ಅತ್ಯುನ್ನತ ಅನುಗ್ರಹವನ್ನು ನಮ್ಮನ್ನು ಅನುಗ್ರಹಿಸಿದ್ದಾನೆ, ಅದರ ಮೂಲಕ ನಾವು ತರಬೇತಿ ಪಡೆಯಬಹುದಾಗಿದೆ ಮತ್ತು ನಮ್ಮನ್ನು ಶುದ್ಧೀಕರಿಸಬಹುದಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ, ಆತ್ಮಗಳನ್ನು ಶುದ್ಧೀಕರಿಸುವ ಪ್ರಮುಖ ಸಾಧನವೆಂದರೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಎಂದು ವಿವರಿಸಲಾಗಿದೆ. ಹುಝೂರ್ ಅನ್ವರ್(ಅತಬಿಅ) ಅವರು ಅಹ್ಮದಿಯಾ ಜಮಾಅತ್ತಿನ ಸದಸ್ಯರಿಗೆ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಪದೇ ಪದೇ ಸಲಹೆ ನೀಡುತ್ತಾರೆ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವ ಯೋಜನೆಗಳನ್ನು ಅಲ್ಲಾಹ ಆದೇಶವಾಗಿರುವಂತಹ ಪವಿತ್ರ ಖುರ್‌ಆನ್‌ನ ಆಯತ್‌ಗಳಿಂದ ಮತ್ತು ಅದರ ಜ್ಞಾನಭರಿತ ವ್ಯಾಖ್ಯಾನಗಳಿಂದ ನಮ್ಮ ಗಮನ ಸೆಳೆಯುತ್ತಾರೆ, ಅದಲ್ಲದೆ ಆರ್ಥಿಕ ತ್ಯಾಗಗಳ ಕುರಿತು ಹಝ್ರತ್ ಪೈಗಂಬರ್(ಸ)ರ ಸಹಾಬಗಳ ವಿಶ್ವಾಸವರ್ಧಕ ಆರ್ಥಿಕ ತ್ಯಾಗಗಳ ಘಟನೆಗಳನ್ನು ವಿವರಿಸುತ್ತಾರೆ. ನಮ್ಮ ಪ್ರೀತಿಯ ಯಜಮಾನರಾದ ಹುಝೂರ್ ಅನ್ವರ್(ಅತಬಿಅ) ಅವರ ಸಂಬೋಧನೆಗಳಲ್ಲಿ ಮತ್ತು ಭಾಷಣಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಗಳ ಮತ್ತು ಜಾಗತಿಕ ಅಹ್ಮದಿ ನಿಷ್ಠಾವಂತ ಸದಸ್ಯರ ಆರ್ಥಿಕ ತ್ಯಾಗಗಳ ಘಟನೆಗಳು ನಮ್ಮ ವಿಶ್ವಾಸವನ್ನು ಬಲಪಡಿಸುತ್ತದೆ. ಈ ಆರ್ಥಿಕ ತ್ಯಾಗದ ಘಟನೆಗಳು ಸಹಾಬಾಗಳ ತ್ಯಾಗವನ್ನು ನೆನಪಿಸುತ್ತವೆ. ಈ ತ್ಯಾಗದ ಘಟನೆಗಳನ್ನು ಆಲಿಸಿದಾಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಕವನ ಪಂಕ್ತಿಯ ನೆನಪಾಗುತ್ತದೆ:

ಮುಬಾರಕ್ ವೊ ಜೊ ಈಮಾನ್ ಲಾಯಾ
ಸಹಾಬ ಸೆ ಮಿಲಾ ಜಬ್ ಮುಜ್ಹ್‌ಕೊ ಪಾಯಾ

ಈ ನಿಟ್ಟಿನಲ್ಲಿ, ಗಣ್ಯ ಭಾಷಣಕಾರರು ಹಝ್ರತ್ ಖಲೀಫತುಲ್ ಮಸೀಹ್ ಅಲ್-ಅವ್ವಲ್(ರ) ರವರ, ಹಝ್ರತ್ ಮುನ್ಷಿ ಝಫರ್ ಅಹ್ಮದ್ ಸಾಹಿಬ್ ಕಪುರ್ಥಲ್ವಿ(ರ) ರವರ ಆರ್ಥಿಕ ತ್ಯಾಗದ ವಿಧಶ್ವಾಸವರ್ಧಕ ಘಟನೆಗಳನ್ನು ವಿವರಿಸಿದರು.

ಹಝ್ರತ್ ಇಬ್ನ್ ಮಸ್‌ಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಅವರು ಹೇಳಿದರು ಎರಡು ಜನರನ್ನು ಹೊರತುಪಡಿಸಿ ಯಾರೊಬ್ಬರ ಬಗ್ಗೆಯೂ ಹೆಮ್ಮೆ ಪಡಬಾರದು. ಒಬ್ಬರು ಸರ್ವಶಕ್ತನಾದ ಅಲ್ಲಾಹನು ಸಂಪತ್ತನ್ನು ನೀಡಿದ ವ್ಯಕ್ತಿ ಮತ್ತು ಅವನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದನು, ಇನ್ನೊಬ್ಬನು ಸರ್ವಶಕ್ತನಾದ ಅಲ್ಲಾಹನು ತಿಳುವಳಿಕೆ, ಬುದ್ಧಿವಂತಿಕೆ ಮತ್ತು ಜ್ಞಾನವನ್ನು ನೀಡಿದ ವ್ಯಕ್ತಿ. ಆತನು ಅದರ ಸಹಾಯದಿಂದ ಜನರಿಗೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ ಮತ್ತು ಜನರಿಗೆ ಬೋಧಿಸುತ್ತಾನೆ. ಗಣ್ಯ ಭಾಷಣಗಾರರು: ವಿಶ್ವದ ವಿವಿಧ ದೇಶಗಳ ಅಹ್ಮದೀಯರು ಮಾಡಿದ ಆರ್ಥಿಕ ತ್ಯಾಗಗಳ ವಿಶ್ವಾಸವರ್ಧಕ ಘಟನೆಗಳನ್ನು ವಿವರಿಸಿದರು. ಅಂತಿಮವಾಗಿ, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ "ಇಝಾಲ ಔಹಾಮ್" ಪುಸ್ತಕದ ಆಯ್ದ ಭಾಗವನ್ನು ಉಲ್ಲೇಖಿಸುವ ಮೂಲಕ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಓ ನನ್ನ ಆತ್ಮೀಯ ಸ್ನೇಹಿತರೇ! ನಾನು ನಿಮಗೆ ಭರವಸೆ ನೀಡುವುದೇನೆಂದರೆ ಸರ್ವಶಕ್ತನಾದ ಅಲ್ಲಾಹನು ನಿಮ್ಮ ಸಹಾನುಭೂತಿಗಾಗಿ ನಿಜವಾದ ಉತ್ಸಾಹವನ್ನು ನನಗೆ ಅನುಗ್ರಹಿಸಿದ್ದಾನೆ. ಮತ್ತು ನಿಮ್ಮ ನಂಬಿಕೆ (ಈಮಾನ್) ಮತ್ತು ದೈವಜ್ಞಾನವನ್ನು (ಮಾರಿಫತ್) ವರ್ಧಿಸುವುದಕ್ಕಾಗಿ ನನಗೆ ನಿಜವಾದ ಜ್ಞಾನವನ್ನು ನೀಡಲಾಗಿದೆ ಮತ್ತು ಈ ದೈವಜ್ಞಾನವು ನಿಮಗೂ ಮತ್ತು ನಿಮ್ಮ ವಂಶಸ್ಥರಿಗೂ ಬೇಕಾಗಿದೆ. ಆದ್ದರಿಂದ, ನೀವು ನಿಮ್ಮ ಧಾರ್ಮಿಕ ಕಾರ್ಯಗಳಿಗೆ ನಿಮ್ಮ ಪರಿಶುದ್ಧ ಸಂಪತ್ತಿನಿಂದ ಸಹಾಯ ಮಾಡಬೇಕು ಮತ್ತು ಸರ್ವಶಕ್ತನಾದ ಅಲ್ಲಾಹನು ನಿಮಗೆ ಶಕ್ತಿಯನ್ನು ನೀಡಿದವರೆಗೆ ಪ್ರತಿಯೊಬ್ಬ ವ್ಯಕ್ತಿಯು ಹಿಂಜರಿಯಬಾರದು ಎಂದು ನಾನು ದೃಢಸಂಕಲ್ಪದಿಂದ ನೆಲೆನಿಂತಿರುವೆನು. ಮತ್ತು ನೀವು ನಿಮ್ಮ ಸಂಪತ್ತನ್ನು ಸರ್ವಶಕ್ತನಾದ ಅಲ್ಲಾಹ್ ಹಾಗೂ ಪ್ರವಾದಿಗಳಿಗೆ ಶ್ರೇಷ್ಠ ಎಂದು ಭಾವಿಸಬಾರದು, ಮತ್ತು ನಾನು ಸಾಧ್ಯವಾದಷ್ಟು ರೀತಿಯಲ್ಲಿ ಸಾಹಿತ್ಯದ

ಮೂಲಕ, ಸರ್ವಶಕ್ತನಾದ ಅಲ್ಲಾಹನ ಪವಿತ್ರಾತ್ಮವು ನನಗೆ ನೀಡಿರುವಂತಹ ಈ ಜ್ಞಾನವನ್ನು ಮತ್ತು ಅನುಗ್ರಹಗಳನ್ನು ಏಷ್ಯಾ ಮತ್ತು ಯುರೋಪ್‌ನ ದೇಶಗಳಲ್ಲಿ ಹರಡಿಸುತ್ತೇನೆ."

(ಇಝಾಲಾ ಔಹಾಮ್, ರೂಹಾನಿ ಖಝಾಈನ್, ಸಂಪುಟ-3, ಪುಟ-516)

ಸರ್ವಶಕ್ತನಾದ ಅಲ್ಲಾಹನು ನಮಗೆಲ್ಲರಿಗೂ ಆರ್ಥಿಕ ತ್ಯಾಗದ ಉನ್ನತ ಗುಣಮಟ್ಟವನ್ನು ಸಾಧಿಸುವ ಸಾಮರ್ಥ್ಯವನ್ನು ನೀಡಲಿ. ಆಮೀನ್.

**ಎರಡನೇ ದಿನ, ಎರಡನೇ ಅಧಿವೇಶನ**

ಎರಡನೇ ದಿನದ ಎರಡನೇ ಅಧಿವೇಶನದ ಅಧ್ಯಕ್ಷತೆಯನ್ನು ಸದರ್ ಮಜ್ಲಿಸ್ ವಖ್ಫೆ ಜದೀದ್ ಆಗಿರುವ ಮಾನ್ಯ ಸೈಯದ್ ತನ್ವೀರ್ ಅಹ್ಮದ್ ಸಾಹಿಬ್ ವಹಿಸಿದ್ದರು. ಗೌರವಾನ್ವಿತ ಹಾಫಿಝ್ ಫಾರೂಕ್ ಅಹ್ಮದ್ ಆಝಮ್ ಅವರು ಸೂರಾ ಅಲ್-ಹುಜುರಾತ್‌ನ 12 ರಿಂದ 14 ರವರೆಗಿನ ವಚನಗಳನ್ನು ಪಠಿಸಿದರು, ಇದರ ಉರ್ದು ಅನುವಾದವನ್ನು ಮಜ್ಲಿಸ್ ಖುದ್ದಾಂ-ಉಲ್-ಅಹ್ಮದಿಯಾ ಇಂಡಿಯಾದ ಅಧ್ಯಕ್ಷರಾದ ಗೌರವಾನ್ವಿತ ಶಮೀಮ್ ಅಹ್ಮದ್ ಘೌರಿ ಅವರು ಪ್ರಸ್ತುತಪಡಿಸಿದರು. ಇದಾದ ನಂತರ, ಗೌರವಾನ್ವಿತ ಮುರ್ಷಿದ್ ಅಹ್ಮದ್ ಡಾರ್ ಮತ್ತು ಅವರ ಸಂಗಡಿಗರು, ಅತ್ಯಂತ ಸುಮಧುರವಾಗಿ, ಸಯ್ಯಿದ್ನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಈ ಕೆಳಗಿನ ಕಾವ್ಯಾತ್ಮಕ ಕವಿತೆಯನ್ನು ಸ್ತೋತ್ರದ ರೂಪದಲ್ಲಿ ಪ್ರಸ್ತುತಪಡಿಸಿದರು.

ಮೆರಿ ರಾತ್ ದಿನ್ ಬಸ್ ಯಹೀ ಇಕ್ ದುಆ ಹೈ
ಕೆ ಇಸ್ ಆಲಮೆ ಕೊನ್ ಕಾ ಇಕ್ ಖುದಾ ಹೈ
ಉಸೀ ನೆ ಹೈ ಪೈದಾ ಕಿಯಾ ಇಸ್ ಜಹಾಂ ಕೊ
ಸಿತಾರೊಂ ಕೊ ಸೂರಜ್ ಕೊ ಔರ್ ಆಸ್ಮಾನ್ ಕೊ

ತದನಂತರ, ಈ ಅಧಿವೇಶನದ ಮೊದಲ ಭಾಷಣವನ್ನು ಮೌಲಾನಾ ಮುನೀರ್ ಅಹ್ಮದ್ ಖಾದಿಮ್ ಸಾಹಿಬ್ ಅವರು "ಹಝ್ರತ್ ಮುಸ್ಲಿಹ್ ಮೌಊದ್ (ರ) ರವರ ಭಾಷಣ 'ಅಹ್ಮದಿಅತ್ ಎಂದರೆ ಯಥಾರ್ಥ ಇಸ್ಲಾಂ' ಅದರ ಹಿನ್ನಲೆ ಹಾಗೂ ದೂರಗಾಮಿ ಪರಿಣಾಮಗಳು" ಎಂಬ ವಿಷಯದ ಕುರಿತು ಮಾಡಿದರು. ತಮ್ಮ ಭಾಷಣದ ಆರಂಭದಲ್ಲಿ, ಅವರು ಸೈಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಆ ದಿವ್ಯ ಸ್ವಪ್ನವನ್ನು ವಿವರಿಸಿದರು ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಲಂಡನ್ ನಗರದ ಒಂದು ವೇದಿಕೆಯ ಮೇಲೆ ನಿಂತು ಇಸ್ಲಾಂ ಧರ್ಮದ ಸತ್ಯವನ್ನು ಆಂಗ್ಲ ಭಾಷೆಯಲ್ಲಿ ಪ್ರದರ್ಶಿಸುತ್ತಿರುವುದನ್ನು ಕಂಡ ದರ್ಶನವನ್ನು ವಿವರಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಈ ಸ್ವಪ್ನವನ್ನು ಈ ರೀತಿ ವ್ಯಾಖ್ಯಾನಿಸಿದರು: ನಾನು ಇಲ್ಲದಿದ್ದರೂ ನನ್ನ ಬರಹಗಳು ಆ ಜನರಲ್ಲಿ ಹರಡುವುದು ಮತ್ತು ಸಾತ್ವಿಕರಾದ ಬ್ರಿಟಿಷರು ಇಸ್ಲಾಂ ಧರ್ಮ ಸ್ವೀಕರಿಸುವರು.

ಹಝ್ರತ್ ಮುಸ್ಲೆಹ್ ಮೌಊದ್(ರ) ಕೆಲವು ಕನಸುಗಳನ್ನು ಕಂಡರು, ಅದರಿಂದ ವಿದೇಶದ ಪ್ರಯಾಣ ಮತ್ತು ಸಮ್ಮೇಳನದಲ್ಲಿ ಮಾಡಿದ ಭಾಷಣವು ಅಲ್ಲಾಹನ ಉದ್ದೇಶ ಮತ್ತು ಅವನ ವಿಧಿ ಎಂದು ಅವರು ತೀರ್ಮಾನಿಸಿದರು. ಈ ಪ್ರಯಾಣದ ಸಮಯದಲ್ಲಿ, ಹುಝುರ್(ರ) ಅವರು ರೈಲಿನಲ್ಲಿ ಬಾಂಬೆಯನ್ನು ತಲುಪಿದರು ಮತ್ತು ಬಾಂಬೆಯಿಂದ ಅದನ್‌ಗೆ ಹಡಗಿನ ಮೂಲಕ ಸಈದ್ ಪೋರ್ಟ್‌ಗೆ ಮತ್ತು ಅಲ್ಲಿಂದ ಖಾಹಿರಾದಿಂದ ಬೈತುಲ್ ಮುಖದ್ದಸ್‌ಗೆ. ಬೈತುಲ್ ಮುಖದ್ದಸ್‌ನಿಂದ ಸೀರಿಯಾಗೆ ಮತ್ತೆ ಅಲ್ಲಿಂದ ಲಂಡನ್‌ಗೆ ತಲುಪಿದರು.

ಹುಝೂರ್(ರ) ಅವರು ಹಲವಾರು ವಾರಗಳ ಕಾಲ ಲಂಡನ್‌ನಲ್ಲಿ ತಂಗಿದ್ದರು ಮತ್ತು ಈ ಸಮಯದಲ್ಲಿ ಅವರು ಅಲ್ಲಿ ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ಅನೇಕ ಯೋಜನೆಗಳನ್ನು ಮಂಡಿಸಿದರು. ಬ್ರಿಟಿಷ್ ಪತ್ರಿಕೆಗಳು ಹುಝೂರ್(ರ) ರ ಆಗಮನದ ಬಗ್ಗೆ, ಅವರ ವ್ಯಕ್ತಿತ್ವದ ಬಗ್ಗೆ ವರದಿ ಮಾಡಿದ್ದವು. ಅದೇ ರೀತಿ ಯುರೋಪಿನಲ್ಲಿ ಇಸ್ಲಾಂ ಧರ್ಮವನ್ನು ಹರಡಲು ಅವರ ಪ್ರಯತ್ನಗಳು. ಹರಡುವ ದೃಢಸಂಕಲ್ಪದ ಬಗ್ಗೆ ವ್ಯಾಪಕ ಚರ್ಚೆ ನಡೆಸಿದರು. ಕೆಲವು ಮತಾಂಧ ಕ್ಯಾಥೋಲಿಕ್ ಪತ್ರಿಕೆಗಳು ಇದು ಕ್ರಿಶ್ಚಿಯನ್ ಸಮುದಾಯದ ವಿರುದ್ಧ ಒಂದು ಪಿತೂರಿ ಎಂದು ಬರೆಯಿತು. ಮತ್ತು ಕೆಲವರು ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಇಮಾಮರಿಗೆ ನೀಡಿದಷ್ಟು ಪ್ರಸಾರವು ಬ್ರಿಟನ್‌ಗೆ ಭೇಟಿ ನೀಡುವ ಯಾವುದೇ ಲಾರ್ಡ್‌ಗೂ ಅಷ್ಟು ಪ್ರಸಾರ ನೀಡಲಾಗುವುದಿಲ್ಲ ಎಂದು ಬರೆದಿದ್ದಾರೆ. ಆ ಸಮಯದಲ್ಲಿಯೇ ಹುಝೂರ್(ರ) ಅವರು 1924 ರ ಅಕ್ಟೋಬರ್ 19 ರಂದು ಬ್ರಿಟನ್‌ನ ಮೊದಲ ಮಸೀದಿಯಾದ "ಮಸ್ಜಿದ್ ಫಝಲ್" ನ ಅಡಿಪಾಯವನ್ನು ಹಾಕಿದರು.

ಹುಝೂರ್(ರ) ರವರ ಮಹಾನ್ ಉಪನ್ಯಾಸವು ಪ್ರೇಕ್ಷಕರನ್ನು ಒಂದು ಗಂಟೆ ಕಾಲ ವಿಸ್ಮಯಗೊಳಿಸಿತು, ಮತ್ತು ಎಲ್ಲರೂ ಹೆಚ್ಚಿನ ಗಮನ ಮತ್ತು ಏಕಾಗ್ರತೆಯಿಂದ ಆಲಿಸಿದರು. ಡಜನ್ಗಟ್ಟಲೆ ವಿದ್ವಾಂಸರು ಅದರ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಆ ಕಾಲದ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆ ಹೀಗೆ ಬರೆದಿದೆ:

" ಆ ಸಮ್ಮೇಳನದಲ್ಲಿ ಕಾಣಿಸಿಕೊಂಡ ಒಂದು ರೋಮಾಂಚನಕಾರಿ ಘಟನೆ ಇಂದು ಮಧ್ಯಾಹ್ನ ಇಸ್ಲಾಂನ ಒಂದು ಹೊಸ ಪಂಥದ ಪ್ರಸ್ತಾಪವಾಗಿತ್ತು. ಹೊಸ ಪಂಥ ಎಂಬುದನ್ನು ನಾವು ಅನುಕೂಲಕ್ಕಾಗಿ ಅಳವಡಿಸಿಕೊಂಡಿದ್ದೇವೆ. ಇಲ್ಲದಿದ್ದರೆ ಈ ಜನರು ಅದನ್ನು ಒಪ್ಪುವುದಿಲ್ಲ. ಈ ಪಂಥದ ಬುನಾದಿ ಅವರ ಹೇಳಿಕೆಯ ಪ್ರಕಾರ ಇಂದಿನಿಂದ 34 ವರ್ಷಗಳ ಹಿಂದೆ ಅದರ ಭವಿಷ್ಯವಣಿ ಬೈಬಲ್ ಮತ್ತುಇತರ ಪುಸ್ತಕಗಳಲ್ಲಿ ಇದೆ. ಈ ಸಂಘಟನೆಯ ವಾದವೇನೆಂದರೆ ಅಲ್ಲಾಹನು ತನ್ನ ಸ್ಪಷ್ಟವಾದ ದೇವವಾಣಿಯೊಂದಿಗೆ ಈ ಸಂಘಟನೆಯನ್ನು ಸ್ಥಾಪಿಸಿದ್ದಾನೆ. ಅದರ ಉದ್ದೇಶ ಮಾನವ ಕುಲವನ್ನು ಸೃಷ್ಟಿಕರ್ತನನ್ನು ಗುರುತಿಸಿಕೊಡುವುದಾಗಿದೆ. ಓರ್ವ ಭಾರತೀಯ ಪ್ರಜೆ ಬಿಳಿ ದಸ್ತಾರ್ ಧರಿಸಿದ್ದಾನೆ ಮತ್ತು ಅವರ ಮುಖವು ಪ್ರಕಾಶಮಾನವಾಗಿ ಸಂತೋಷದಿಂದ ಕೂಡಿರುತ್ತದೆ. ಕಪ್ಪು ಗಡ್ಡವನ್ನು ಹೊಂದಿರುವರು. ಅವರ ಹೆಸರು ಗೌರವಾನ್ವಿತ ಖಲೀಫತುಲ್ ಮಸೀಹ್ ಅಲ್-ಹಾಜ್ ಮಿರ್ಝಾ ಬಶೀರುದ್ದೀನ್ ಮಹಮ್ಮೂದ್ ಅಹ್ಮದ್ ಅಥವಾ ಸಂಕ್ಷಿಪ್ತವಾಗಿ 'ಖಲೀಫತುಲ್ ಮಸೀಹ್" ಎಂದು ತಮ್ಮ ಲೇಖನದಲ್ಲಿ ಪ್ರಸ್ತುತಪಡಿಸಿದ್ದಾರೆ. "ಇಸ್ಲಾಂನಲ್ಲಿ ಅಹ್ಮದಿಯಾ ಸಂಘಟನೆ' ಅವರ ಶೀರ್ಷಿಕೆಯಾಗಿದೆ. ಕೆಲವು ರೋಮನ್ ಟೋಪಿ ಧರಿಸಿದ್ದ ಅವರ ಮತ್ತೊಬ್ಬ ಶಿಷ್ಯ ಅವರ ಲೇಖನವನ್ನು ಉತ್ತಮ ಗುಣಮಟ್ಟದೊಂದಿಗೆ ಓದಿದನು. ಅವರು ತಮ್ಮ ಲೇಖನವನ್ನು ಅದರಲ್ಲಿ ಇಸ್ಲಾಂ ಧರ್ಮವನ್ನು ಬೆಂಬಲಿಸುವ ಮತ್ತು ಸಮರ್ಥಿಸುವ ವಿಷಯ ಅಧಿಕವಿತ್ತು. ಬಹುಸಂಖ್ಯಾತರಿಗೆ ಭಾವೋದ್ರಿಕ್ತ ಮನವಿಯೊಂದಿಗೆ ಕೊನೆಗೊಳಿಸಿದರು. ಆ ಮೂಲಕ ಅವರು ಸಭಿಕರಿಗೆ ಈ ಹೊಸ ವಾಗ್ದತ್ತ ಮಸೀಹನನ್ನು ಮತ್ತು ಹೊಸ ಬೋಧನೆಗಳನ್ನು ಸ್ವೀಕರಿಸುವಂತೆ ಕರೆ ನೀಡಿದರು. ಈ ಪತ್ರಿಕೆಯ ನಂತರದ ಹರ್ಷೋದ್ಗಾರಗಳು ವ್ಯಕ್ತಪಡಿಸಿದ ಮೆಚ್ಚುಗೆ ಮತ್ತು ಸಂತೋಷವನ್ನುಇದುವರೆಗಿನ ಯಾವುದೇ ಪತ್ರಿಕೆಗೆ ವ್ಯಕ್ತವಾಗಿಲ್ಲವೆಂಬುದು ಮುಖ್ಯವಾಗಿದೆ."

ಈ ಅಧಿವೇಶನದ ಎರಡನೇ ಭಾಷಣವನ್ನು ಮಾನ್ಯ ಮೌಲಾನಾ ತನ್ವೀರ್ ಅಹ್ಮದ್ ಖಾದಿಮ್ ಸಾಹಿಬ್ ಇಂಚಾರ್ಜ್ ಶೊಬ ರಿಶ್ತಾ ನಾತಾ ಅವರು "ಅಹ್ಮದಿಯಾ ಜಮಾಅತ್ ಮತ್ತು ಜನಸೇವೆ" ಎಂಬ ಶೀರ್ಷಿಕೆಯಡಿಯಲ್ಲಿ ಪಂಜಾಬಿ ಭಾಷೆಯಲ್ಲಿ ಮಾಡಿದರು. ಅವರು ಹೇಳಿದರು: ದೇವರ ಸಂತೋಷವನ್ನು ಪಡೆಯಲು, ಧರ್ಮ, ಬಣ್ಣ ಅಥವಾ ಜನಾಂಗವನ್ನು ಲೆಕ್ಕಿಸದೆ, ಕಾನೂನುಬದ್ಧ ವಿಷಯಗಳಲ್ಲಿ ದೇವರ ಜೀವಿಗಳಿಗೆ ಸೇವೆ ಮಾಡುವುದು, ಸಹಾಯ ಮಾಡುವುದು ಮತ್ತು ಸಹಾಯ ಮಾಡುವುದನ್ನು ಮಾನವೀಯತೆಯ ಸೇವೆ ಎಂದು ಕರೆಯಲಾಗುತ್ತದೆ. ಮಾನವೀಯತೆಯ ಸೇವೆಯು ದೈವಿಕ ಪ್ರೀತಿಯ ಅವಶ್ಯಕತೆಯಾಗಿದೆ, ನಂಬಿಕೆಯ ಮನೋಭಾವ. ಮತ್ತು ಇಹಲೋಕ ಮತ್ತು ಪರಲೋಕದ ಪ್ರತಿಫಲಕ್ಕೆ ಕಾರಣವಾಗುತ್ತದೆ. ಮಾನವೀಯತೆಗೆ ಸೇವೆ ಎಂದರೆ ಕೇವಲ ಆರ್ಥಿಕ ಬೆಂಬಲವಲ್ಲ, ಆದರೆ ಯಾರನ್ನಾದರೂ ಬೆಂಬಲಿಸುವುದು, ಯಾರಿಗಾದರೂ ಶಿಕ್ಷಣ ನೀಡುವುದು, ಉಪಯುಕ್ತ ಸಲಹೆ ನೀಡುವುದು, ಯಾರಿಗಾದರೂ ಕೌಶಲ್ಯವನ್ನು ಕಲಿಸುವುದು, ಶೈಕ್ಷಣಿಕ ಬೆಂಬಲವನ್ನು ಒದಗಿಸುವುದು, ಶೈಕ್ಷಣಿಕ ಮತ್ತು ಕಲ್ಯಾಣ ಸಂಸ್ಥೆಗಳನ್ನು ಸ್ಥಾಪಿಸುವುದು, ಯಾರೊಬ್ಬರ ನೋವು, ಸಂಕಟದಲ್ಲಿ ಭಾಗಿಯಾಗುವುದು ಮತ್ತು ಅವರಿಗೆ ಸಹಾಯ ಮಾಡುವುದು. ಇತರ ವಿಷಯಗಳಂತೆ, ಮಾನವೀಯತೆಗೆ ಸೇವೆ ಸಲ್ಲಿಸಲು ವಿಭಿನ್ನ ಮಾರ್ಗಗಳಿವೆ.

ಇಸ್ಲಾಂನಲ್ಲಿ, ಮಾನವೀಯತೆಯ ಗೌರವ, ದೇವರ ಸೃಷ್ಟಿಗೆ ಸೇವೆ ಮತ್ತು ಕರುಣೆಯನ್ನು ಹೆಚ್ಚು ಗೌರವಿಸಲಾಗುತ್ತದೆ. ಆದ್ದರಿಂದ, ಪವಿತ್ರ ಖುರ್‌ಆನ್ ಮತ್ತು ಪ್ರವಾದಿಯ ಹದೀಸ್‌ಗಳಲ್ಲಿ, ಮಾನವೀಯತೆಗೆ ಸೇವೆಯನ್ನು ಅತ್ಯುತ್ತಮ ನೈತಿಕತೆ ಮತ್ತು ಶ್ರೇಷ್ಠ ಆರಾಧನಾ ಕ್ರಿಯೆ ಎಂದು ವಿವರಿಸಲಾಗಿದೆ. ಗೌರವಾನ್ವಿತ ಭಾಷಣಕಾರರು ಪವಿತ್ರ ಖುರ್‌ಆನ್ ಮತ್ತು ಹದೀಸ್‌ನ ಬೆಳಕಿನಲ್ಲಿ ಮಾನವೀಯತೆಯ ಸೇವೆಯ ಕುರಿತು ಇಸ್ಲಾಮಿನ ಬೋಧನೆಗಳನ್ನು ಪ್ರಸ್ತುತಪಡಿಸಿದರು ಮತ್ತು ಈ ನಿಟ್ಟಿನಲ್ಲಿ, ಅವರು ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರ ಉತ್ತಮ ಮಾದರಿಯನ್ನು ವಿವರಿಸಿದರು. ಅದೇ ರೀತಿ, ಈ ನಿಟ್ಟಿನಲ್ಲಿ, ಅವರು ಪ್ರಪಂಚದಾದ್ಯಂತ ಅಹ್ಮದಿಯಾ ಸಮುದಾಯದ ಸಾರ್ವಜನಿಕ ಸೇವೆಯ ವ್ಯಾಪ್ತಿಯನ್ನು ಉಲ್ಲೇಖಿಸಿದರು ಮತ್ತು ಈ ನಿಟ್ಟಿನಲ್ಲಿ ಇತರರ ಅನಿಸಿಕೆಗಳನ್ನು ಸಹ ವ್ಯಕ್ತಪಡಿಸಿದರು.

**ಮಾನ್ಯ ಅಬ್ದುಲ್ ಖಾದಿರ್ ಮುದಲ್ಲಲ್, ಪ್ಯಾಲೆಸ್ಟೈನ್ ಜಮಾಅತ್‌ನ**

## ಅಧ್ಯಕ್ಷರ ಅನಿಸಿಕೆಗಳು

ಈ ಅಧಿವೇಶನದಲ್ಲಿ, ಅಹ್ಮದಿಯಾ ಪ್ಯಾಲೆಸ್ಟೈನ್ ಜಮಾಅತ್ತಿನ ಅಧ್ಯಕ್ಷರಾದ ಗೌರವಾನ್ವಿತ ಅಬ್ದುಲ್ ಖಾದಿರ್ ಮುದಲ್ಲಲ್ ಅವರು ತಮ್ಮ ಹೃದಯಪೂರ್ವಕ ಮಾತುಗಳಲ್ಲಿ ಹೀಗೆ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ತಿಗೆ ಸೇರಿ ಇಪ್ಪತ್ತೈದು ವರ್ಷಗಳ ಕಾಲದ ನಂತರ ಈ ಪವಿತ್ರ ನಗರದಲ್ಲಿ ಹಾಜರಾಗುವ ಸೌಭಾಗ್ಯ ನೀಡಿದ್ದಕ್ಕಾಗಿ ನಾನು ಸರ್ವಶಕ್ತನಾದ ಅಲ್ಲಾಹನಿಗೆ ತುಂಬಾ ಕೃತಜ್ಞನಾಗಿದ್ದೇನೆ. ನನ್ನ ಬಹುಕಾಲದ ಆಸೆ ಈಡೇರಿದೆ. ನನ್ನ ಪ್ರೀತಿಯ ಸರದಾರ ಅಹ್ಮದ್ ಅಲೈಹಿಸ್ಸಲಾಮ್.......... ನಾನು ಬಹಳ ಸಮಯದಿಂದ ನಿಮ್ಮ ಪುಸ್ತಕಗಳು ಮತ್ತು ಬರಹಗಳ ಸಾಗರದಲ್ಲಿ ಮುಳುಗಿದ್ದೇನೆ ಮತ್ತು ಈ ಬರಹಗಳು ನನ್ನ ಹೃದಯದ ಆಳಕ್ಕೆ ನನ್ನನ್ನು ಆಕರ್ಷಿಸಿವೆ. ಆದರೆ ಇಂದು, ನಿಮ್ಮ ಅನುಗ್ರಹದಾಯಕ ಹೆಜ್ಜೆಗಳು ಒಮ್ಮೆ ನಡೆದ ಆ ಹಾದಿಗಳು ಮತ್ತು ಬೀದಿಗಳಲ್ಲಿ ನಡೆಯುವ ಸೌಭಾಗ್ಯ ನನಗೆ ಲಭಿಸಿದಾಗ, ನನ್ನ ಹೃದಯ ಮತ್ತೊಮ್ಮೆ ಅದೇ ಮೋಡಿಮಾಡುವ ಭಾವನೆಯಿಂದ ತುಂಬಿದೆ. ಓ ನನ್ನ ಪ್ರಭು! ನನ್ನ ಹೃದಯದ ಸ್ಥಿತಿ ನಿನಗೆ ಚೆನ್ನಾಗಿ ತಿಳಿದಿದೆ ಮತ್ತು ಅದರ ಅನಿಯಮಿತ ಬಡಿತಗಳ ಬಗ್ಗೆ ನಿಮಗೆ ಚೆನ್ನಾಗಿ ತಿಳಿದಿದೆ. ಸೈಯಿದೀ! ನನ್ನ ತೇವಗೊಂಡ ಕಣ್ಣುಗಳು, ಅವುಗಳ ಮುಂದೆ ನಿಮ್ಮನ್ನು ನೋಡಲಾಗದಿದ್ದರೂ, ಈ ಸ್ಥಳಗಳಲ್ಲಿ ನಿಮ್ಮ ಉಪಸ್ಥಿತಿಯನ್ನು ಅನುಭವಿಸುತ್ತವೆ. ನಮ್ಮ ನಡುವಿನ ಕಾಲದ ಅಂತರಗಳು ಮಾಯವಾಗಿದೆ ಎಂದು ಭಾಸವಾಗುತ್ತದೆ, ಮತ್ತು ನೀವು ನಮ್ಮಲ್ಲಿ ಒಂದು ಹೊಸ ಚೈತನ್ಯ ಮತ್ತು ಉತ್ಸಾಹದಿಂದ ನಮ್ಮಲ್ಲಿ ಹಝ್ರತ್ ಪೈಗಂಬರ್(ಸ)ರ ಪ್ರೀತಿಯ ಆತ್ಮವನ್ನು ಪುನರುಜ್ಜೀವನಗೊಳಿಸುತ್ತ ಈ ಭೂಮಿಯಿಂದ ದೂರ ಆಕಾಶದ ಎತ್ತರಕ್ಕೆ ಕರೆದೊಯ್ಯುತ್ತಿದ್ದೀರಿ ಎಂದು ತೋರುತ್ತದೆ. ನಮಗೆ ಭೂಮಿಯ ಗುರುತ್ವಾಕರ್ಷಣೆ ಮಾಯವಾಗಿದೆ ಮತ್ತು ನಾವು ಗಾಳಿಯಲ್ಲಿ ತೇಲುತ್ತಿದ್ದೇವೆ ಎಂದು ಭಾಸವಾಗುತ್ತದೆ. ಕಣ್ಣಿನ ಕುರುಡುತನ ಮಾಯವಾಗಿ ಅದರ ಬದಲಾಗಿ ಪ್ರಕಾಶಮಾನವಾದ ಕಣ್ಣು ಮತ್ತು ತೀಕ್ಷ್ಣ ದೃಷ್ಟಿ ಬಂದಂತೆ ತೋರುತ್ತದೆ. ನನ್ನ ಒಡೆಯನೇ, ಕಾಲ್ಪನಿಕವಾಗಿ ನಿಮ್ಮನ್ನು, ಮಸ್ಜಿದ್ ಮುಬಾರಕ್‌ನ ಹಳೆಯ ಮೆಟ್ಟಿಲುಗಳ ಮೇಲೆ ದೈವ ಪ್ರೀತಿಯಿಂದ ತುಂಬಿ, ಜನರ ದುಃಖಗಳ ಹೊರೆಯನ್ನು ಹೆತ್ತಿ ಬರುತ್ತಿರುವಂತೆ ನಿಮ್ಮನ್ನು ನೋಡುತ್ತಿರುವೆ ಎಂದು ನಾನು ಊಹಿಸುತ್ತೇನೆ. ಕೆಲವೊಮ್ಮೆ ನೀವು ತೇವು ಭರಿತ ಕಣ್ಣುಗಳೊಂದಿಗೆ ಬೈತುದ್ದುಆದಲ್ಲಿ ನಿಮ್ಮ ಪ್ರೀತಿಯ ದೇವರೊಂದಿಗೆ ಮಾತನಾಡುತ್ತಿರುವುದಾಗಿ ಮತ್ತು ಕೆಲವೊಮ್ಮೆ ಬೈತುಲ್ ಫಿಕರ್‌ನಲ್ಲಿ, ಕೆಲವೊಮ್ಮೆ ಬೈತುರ್ರಿಯಾಝತ್‌ನಲ್ಲಿ ಅಲ್ಲಾಹನೊಂದಿಗೆ ಮಾತನಾಡುತ್ತಿರುವುದಾಗಿ ನೋಡುತ್ತೇನೆ. ಈ ಕಲ್ಪನೆಯಲ್ಲಿ ಮುಳುಗಿರುವ ನಾನು, ನಿಮ್ಮ ಅಲೈಹಿಸ್ಸಲಾಮ್‌ರ ದೈವಿಕ ಪ್ರೀತಿಯ ಒಂದು ಸಣ್ಣ ಭಾಗವನ್ನು ಸಹ ಪಡೆಯಬಹುದು ಎಂದು ತುಂಬಾ ಹಂಬಲಿಸುತ್ತೇನೆ. ಅದು ನನ್ನ ಹೃದಯಕ್ಕೆ ತೃಪ್ತಿಯ ಮೂಲವಾಗಿರುತ್ತದೆ ಮತ್ತು ನನ್ನ ಆತ್ಮದ ಬಾಯಾರಿಕೆಯನ್ನು ತಣಿಸುವ ಸಾಧನವಾಗಿರುತ್ತದೆ. ಓ ನನ್ನ ಪ್ರಭು! ನಾನು ನಿಮ್ಮ, ನಿಮ್ಮ ಕುಟುಂಬದ ಮತ್ತು ನಿಮ್ಮ ಸಹಾಬಿಯಾದ ಹಝ್ರತ್ ಮೌಲ್ವಿ ನೂರುದ್ದೀನ್ ಸಾಹಿಬ್ ಅವರ ನಿವಾಸಗಳಿಗೆ ಭೇಟಿ ನೀಡಿದಾಗ ಮತ್ತು ಈ ನಿವಾಸಗಳ ಕೊಠಡಿಗಳು ಮತ್ತು ದ್ವಾರಗಳ ಮೂಲಕ ಹಾದು ಹೋದಾಗ, ಈ ಪವಿತ್ರ ಸ್ಥಳಗಳ ಪ್ರತಿಯೊಂದು ಕಣವೂ ನನ್ನನ್ನು ಸ್ಪರ್ಶಿಸಿದಂತೆ ಭಾಸವಾಯಿತು. ಒಂದು ವಿಚಿತ್ರ ಆಧ್ಯಾತ್ಮಿಕ ಶಕ್ತಿ ಹೊರಹೊಮ್ಮುತ್ತಾ ನನ್ನ ಆತ್ಮವನ್ನು ಭೇದಿಸುತ್ತಾ, ನನ್ನ ಆತ್ಮಕ್ಕೆ ಸಾಂತ್ವನ ಮತ್ತು ಭರವಸೆಯನ್ನು ತರುತ್ತಿತ್ತು. ಮತ್ತು ಬಹುಶಃ ಇದು ಆಶ್ಚರ್ಯವೇನಿಲ್ಲ, ಏಕೆಂದರೆ ನಾನು ಮಾತನಾಡುತ್ತಿರುವ ಮನೆ ಹಝ್ರತ್ ಮಸೀಹ್ ಮೌಊದ್(ಅ) ರವರ ಮನೆಯಾಗಿದೆ. ಅದು, ಮತ್ತು ನಾನು ಮಾತನಾಡುತ್ತಿರುವ ಸ್ಥಳ ಖಾದಿಯಾನ್ ದಾರುಲ್ ಅಮಾನ್ ಆಗಿದೆ. ಓ ನನ್ನ ಪ್ರಭು! ನಾನು ನಿಮ್ಮ ದಾರುಲ್ ಜಿಯಾಫತ್‌ಗೆ ಹೋಗಿದ್ದೆ, ಅದು ಆರಂಭದಲ್ಲಿ ನಿಮ್ಮ ಸಹಾಬರಿಗೆ ಆತಿಥ್ಯ ವಹಿಸಿತ್ತು ಮತ್ತು ಉಳಿಯಲು ಸ್ಥಳವಿಲ್ಲದವರಿಗೆ ಆಶ್ರಯ ತಾಣವಾಗಿತ್ತು. ಮತ್ತು ಈ ಪ್ರವೃತ್ತಿ ಇಂದಿಗೂ ಮುಂದುವರೆದಿದೆ. ಸೈಯಿದೀ!! ನೀವು ಕುಟುಂಬಗಳ ಪೋಷಕರಾಗಿದ್ದೀರಿ ಮತ್ತು ನಿಮ್ಮ ಹೆಸರು ಪ್ರಪಂಚದ ಮೂಲೆ ಮೂಲೆಗಳಲ್ಲಿ ಹರಡುತ್ತಿದೆ. ಓ ನನ್ನ ಪ್ರಭೂ! ನಿಮ್ಮ ಊರಿನಲ್ಲಿ ನಾವು ಪ್ರತಿ ಹೆಜ್ಜೆಯನ್ನೂ ನೆನಪಿಸಿಕೊಳ್ಳುತ್ತೇವೆ ಮತ್ತು ಪ್ರತಿಯೊಂದು ಪದವನ್ನೂ ನೆನಪಿಸಿಕೊಳ್ಳುತ್ತಿದ್ದೇವೆ.

ಓ ನನ್ನ ಪ್ರಭೂ!! ಮಾನವ ಕರುಣೆಯ ಮಾದರಿಯನ್ನು ತೋರಿಸಿ, ದೇವರ ಎಲ್ಲಾ ಜೀವಿಗಳನ್ನು, ಅವನ ಶತ್ರುಗಳನ್ನು ಸಹ, ತನ್ನ ಆತ್ಮಕ್ಕಿಂತ ಹೆಚ್ಚಾಗಿ ಪ್ರೀತಿಸಿದನು. ಓ, ಯಾರ ಪ್ರೀತಿಯು ತಾಯಂದಿರ ಮಕ್ಕಳ ಮೇಲಿನ ಪ್ರೀತಿಗಿಂತ ಹೆಚ್ಚಾಗಿತ್ತೋ ಆತನೇ. ಇಂದು, ನಿಮ್ಮ ಸೇವಕರು ನಿಮ್ಮ ಪರಿಮಳಯುಕ್ತ ಜೀವನಚರಿತ್ರೆಯಲ್ಲಿ ಉಲ್ಲೇಖಿಸಲಾದ ಕರುಣಾಳು ಸೃಷ್ಟಿಯ ಕಥೆಗಳನ್ನು ಪುನರುಜ್ಜೀವನಗೊಳಿಸುತ್ತಿದ್ದಾರೆ, ನೀವು ಲೆಕ್ಕವಿಲ್ಲದಷ್ಟು ಬಡವರು, ನಿರ್ಗತಿಕರು ಮತ್ತು ನಿರ್ಗತಿಕರನ್ನು ದಯೆಯಿಂದ ನಡೆಸಿಕೊಳ್ಳುವ ಮೂಲಕ ರಚಿಸಿದ್ದೀರಿ. ಓ ನನ್ನ ಯಜಮಾನ, ನಾನು ಬಹಿಶ್ತಿ ಮಖ್ಬರಾವನ್ನು ಪ್ರವೇಶಿಸಿದ ತಕ್ಷಣ, ನನಗೆ ಶಾಶ್ವತ ಶಾಂತಿ, ಸಂತೃಪ್ತಿ ಮತ್ತು ನಿರಾಳತೆ ನನ್ನ ಹೃದಯವನ್ನು ಆವರಿಸಿಕೊಂಡಿತು. ಮತ್ತು ನಾನು ನಿಮ್ಮ ಅನುಗ್ರಹದಾಯಕ ಮಝಾರ್ ಬಳಿ ಸಮೀಪಿಸಿದಾಗ, ಅದರ ಗೋಡೆಯ ಮೇಲಿನ ಶಾಸನಗಳನ್ನು ಓದಿದಾಗ, ನನ್ನ ಹೃದಯದಲ್ಲಿ ದ್ವೇಷದ ನೋವು ಹುಟ್ಟಿಕೊಂಡಿತು, ಮತ್ತು ನನಗೆ ಈ ನಶ್ವರ ಪ್ರಪಂಚದ ಬಗ್ಗೆ ಅಸಹ್ಯವಾಯಿತು... ನಂತರ ನಾನು ನಿಮ್ಮ ಅನುಗ್ರಹದಾಯಕ ಮಝಾರ್‌ಗೆ ಇನ್ನೂ ಹತ್ತಿರ ಬಂದಾಗ, ನಾನು ನನ್ನ ಮನಸ್ಸಿನ ಸಂಪೂರ್ಣ ಹೊರೆಯನ್ನು ಕಣ್ಣೀರಿನ ಮೂಲಕ ಹೊರಹಾಕಲು ಪ್ರಯತ್ನಿಸಿದೆ. ಬಹಿಶ್ತಿ ಮಖ್‌ಬರಾದಲ್ಲಿ ನೀವು(ಅ) ನಿಮ್ಮ ಸಹಾಬರೊಂದಿಗೆ ಕುಳಿತು ಆಧ್ಯಾತ್ಮ ಕೂಟಗಳನ್ನು ನಡೆಸುತ್ತಿದ್ದ ಸ್ಥಳದಲ್ಲಿ ನಾನು ಮತ್ತೆ ಮತ್ತೆ ಕುಳಿತಿದ್ದೆ. ಇಲ್ಲಿಗೆ ತಲುಪಿದ ನಂತರ, ಆ ಕೂಟಗಳಲ್ಲಿ ನಾನು ಸಹ ನಿಮ್ಮೊಂದಿಗೆ ಕುಳಿತುಕೊಳ್ಳಬಹುದೆಂದು ನನ್ನ ಹೃದಯ ಪದೇ ಪದೇ ಬಯಸುತ್ತಿತ್ತು. ನಂತರ ನನ್ನ ಕಣ್ಣುಗಳು ಬಿಳಿ ಮಿನಾರ್ ಮೇಲೆ ಬಿದ್ದಾಗ, ಅದರ ಸೌಂದರ್ಯವನ್ನು ನೋಡಿ ಮತ್ತು ಅದರ ಭವ್ಯತೆಯನ್ನು ಅನುಭವಿಸಿದ ನಂತರ ನನ್ನ ಹೃದಯವು ಸಂತೋಷ ಮತ್ತು ನೆಮ್ಮದಿಯಿಂದ ತುಂಬಿತ್ತು. ನಂತರ ನಾನು ಖುದ್ರತೆ ಸಾನಿಯಾದ (ಎರಡನೇ ಶಕ್ತಿಯ) ಸ್ಥಳದ ಕಡೆಗೆ ನೋಡಿ ಹೇಳಿದೆ: ಓ ನನ್ನ ಪ್ರಭೂ!! ನಿಮ್ಮ ಎಲ್ಲಾ ಮಾತುಗಳು ನಿಜವಾಯಿತು. ಓ ನೀತಿವಂತ ಮತ್ತು ನೀತಿವಂತನೇ! ಜಗತ್ತಿನಲ್ಲಿ ಎಷ್ಟು ಜನರು ಖಿಲಾಫತ್ ಸ್ಥಾಪಿಸಲು ಪ್ರಯತ್ನಿಸಿದ್ದಾರೆ, ಆದರೆ ಅವರ ಎಲ್ಲಾ ಪ್ರಯತ್ನಗಳು ಕೇವಲ ನೊರೆ ಮತ್ತು ಮರೀಚಿಕೆ ಎಂದು ಸಾಬೀತಾಗಿದೆ, ಆದರೆ ನಿಮ್ಮ ನಂತರ ಸ್ಥಾಪಿಸಲಾದ ಎರಡನೇ ಶಕ್ತಿಯು ಭೂಮಿಯ ಮೇಲೆ ಶಾಶ್ವತ ಮತ್ತು ಸ್ಥಿರವಾಗಿದೆ. ಮತ್ತು ದೂರದ ಸ್ಥಳಗಳಿಂದ, ಎಲ್ಲಾ ಬಣ್ಣಗಳು ಮತ್ತು ಜನಾಂಗಗಳ ಜನರು ಅಲ್ಲಿಗೆ ಸೇರುತ್ತಲೇ ಇರುತ್ತಾರೆ. ಈ ಸ್ಥಳಗಳ ನೆನಪುಗಳು ನನ್ನ ಹೃದಯದಲ್ಲಿ ದೀರ್ಘಕಾಲ ಉಳಿಯುತ್ತವೆ, ನಿಮ್ಮ ಪಟ್ಟಣದಲ್ಲಿ ಮತ್ತು ನಿಮ್ಮ ಮಝಾರ್‌ನ ಬಳಿ ನಾನು ಕಳೆದ ಪವಿತ್ರ ಕ್ಷಣಗಳನ್ನು ನೆನಪಿಸುತ್ತವೆ. ಈ ಸ್ಥಳದಿಂದ ಬೇರ್ಪಡುವ ನೋವು ಮತ್ತು ಹಂಬಲಕ್ಕೆ ಸಾಂತ್ವನ ನೀಡುವ ಅಳಿಸಲಾಗದ ನೆನಪುಗಳೊಂದಿಗೆ ನಾನು ಇಲ್ಲಿಂದ ಹೊರಡುತ್ತಿದ್ದೇನೆ. ಹಾಗಾಗಿ ಇಂದು ನಾನು ಈ ಸ್ಥಳಗಳಿಂದ ಬೇರ್ಪಡುತ್ತಿದ್ದೇನೆ, ಆದರೆ ಅದರ ನೆನಪುಗಳು ನನ್ನನ್ನು ಎಂದಿಗೂ ಬಿಡುವುದಿಲ್ಲ.

-------------*****-------------

'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:
https://akhbarbadr.in/Kannada/#gsc.tab=0

### ಅಂತಿಮ ವಿಜಯ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು. **(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

## ದಾರುಸ್ಸನಾಅತ್ ಖಾದಿಯಾನ್‌ನಲ್ಲಿ (Ahmadiyya Vocational Training Centre) 2025–2026ನೇ ಸಾಲಿನ ಪ್ರವೇಶಾತಿಗಳು ಪ್ರಾರಂಭವಾಗಿದೆ

ದಾರುಸ್ಸನಾಅತ್ ಖಾದಿಯಾನ್ ಅನ್ನು 2010 ರಲ್ಲಿ ಹಝ್ರತ್ ಖಲೀಫತುಲ್ ಮಾಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಅವರ ಅನುಮೋದನೆ ಮತ್ತು ವಿಶೇಷ ಮಾರ್ಗದರ್ಶನದೊಂದಿಗೆ ಸ್ಥಾಪಿಸಲಾಯಿತು. ಅಹ್ಮದಿ ವಿದ್ಯಾರ್ಥಿಗಳನ್ನು ಕುಶಲರನ್ನಾಗಿ ಮಾಡುವುದು ಮತ್ತು ತಾಂತ್ರಿಕ ಕೋರ್ಸ್‌ಗಳನ್ನು ಕಲಿಸುವ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಸಂಸ್ಥೆಯ ವಿಶೇಷ ಗುರಿಯಾಗಿದೆ. ದಾರುಸ್ಸನಾಅತ್ ಖಾದಿಯಾನ್ ಸರ್ಕಾರಿ ಸಂಸ್ಥೆ NSIC ದೆಹಲಿ ಮತ್ತು ISO ನೋಂದಾಯಿಸಲಾಗಿದೆ. ಇದರಲ್ಲಿ ಮುಂದಿನ ಒಂದು ವರ್ಷದ ಕೋರ್ಸ್‌ಗಳನ್ನು ನಡೆಸಲಾಗುತ್ತದೆ

1. Motor Vehicle, 2. Welding, 3. Electrician, 4. Plumbing, 5. Computer Applications, 6. Diesel Mechanic, 7. AC & Refrigerator

ಖಾದಿಯಾನ್ ಹೊರಗಿನಿಂದ ಬರುವ ಅಹ್ಮದಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಮತ್ತು ಮೆಸ್ ವ್ಯವಸ್ಥೆಗಳು ಲಭ್ಯವಿದೆ. ವಸತಿ ಮತ್ತು ಆಹಾರಕ್ಕಾಗಿ ಯಾವುದೇ ರೀತಿಯ ಶುಲ್ಕವಿಲ್ಲ. ಸುಲಭ ಕಂತುಗಳಲ್ಲಿ ಕೋರ್ಸ್ ಬೋರ್ಡ್ ಶುಲ್ಕವನ್ನು ಮಾತ್ರ ವಿಧಿಸಲಾಗುತ್ತದೆ. ತಮ್ಮ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಲು ಸಾಧ್ಯವಾಗದ ಅಥವಾ 8 ಮತ್ತು 10 ನೇ ನಂತರ ತಾಂತ್ರಿಕ ಕೋರ್ಸ್‌ಗಳನ್ನು ಮಾಡಲು ಸಿದ್ಧರಿರುವ ಅಹ್ಮದಿ ಯುವಕರು ಪ್ರವೇಶಕ್ಕಾಗಿ ಶೀಘ್ರದಲ್ಲೇ ಸಂಪರ್ಕಿಸಿ. ಅಹ್ಮದಿ ಮಕ್ಕಳಿಗೆ ಧಾರ್ಮಿಕ ಶಿಕ್ಷಣವನ್ನೂ ನೀಡಲಾಗುತ್ತದೆ. ಇದಲ್ಲದೆ, English Speaking ಮತ್ತು Personality Development (ವ್ಯಕ್ತಿತ್ವ ವಿಕಸನ) ನ ತರಗತಿಗಳನ್ನು ಸಹ ಪ್ರತಿದಿನ ತೆಗೆದುಕೊಳ್ಳಲಾಗುತ್ತದೆ. 2025–2026 ರ ಹೊಸ ಅಧಿವೇಶನಕ್ಕೆ ಪ್ರವೇಶ ಪ್ರಾರಂಭವಾಗಿದೆ. ಇದರ ತರಗತಿಗಳು ಜುಲೈ 16, 2025 ರಿಂದ ಪ್ರಾರಂಭವಾಗುತ್ತವೆ.

**ಹೆಚ್ಚಿನ ಮಾಹಿತಿಗಾಗಿ ನೀವು ಈ ಕೆಳಗಿನ ಸಂಖ್ಯೆಗಳು ಮತ್ತು ಈಮೇಲ್ ಐಡಿಯನ್ನು ಸಂಪರ್ಕಿಸಬಹುದು:**

darulsanaat.qadian@gmail.com

9872725895, 8604024043

(ಪ್ರಾಂಶುಪಾಲ ದಾರುಸ್ಸನಾತ್ ಖಾದಿಯಾನ್)

## ನಿಶ್ಚಿತಾರ್ಥದ ಸಮಯದಲ್ಲಿ ಸಿಹಿತಿಂಡಿಗಳನ್ನು ಹಂಚಲು ಅನುಮತಿ ಇದೆ, ಆದರೆ ಸಿಡಿಮದ್ದುಗಳನ್ನು ಸಿಡಿಸುವುದು ಮತ್ತು ಮನರಂಜನಾ ಕಾರ್ಯಕ್ರಮ ಇತ್ಯಾದಿಗಳನ್ನು ನಡೆಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಹಝ್ರತ್ ಮಸೀಹ್ ಮವೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನಿಶ್ಚಿತಾರ್ಥಗಳ ಸಮಾರಂಭದಲ್ಲಿ ಸಕ್ಕರೆ ಇತ್ಯಾದಿಗಳನ್ನು ಹಂಚಲಾಗುತ್ತದೆ ವಾಸ್ತವವಾಗಿ ಅದರ ಮೂಲ ಉದ್ದೇಶವೇನೆಂದರೆ, ಇತರ ಜನರಿಗೂ ಇದರ ಬಗ್ಗೆ ಸುದ್ದಿ ತಿಳಿಯಲಿ ಮತ್ತು ಇದರಲ್ಲಿ ಯಾವುದೇ ರೀತಿಯ ಅಡಚಣೆ ಉಂಟಾಗದಿರಲಿ ಎಂದಾಗಿದೆ. ಆದರೆ ಈಗ ಅದರ ಮೂಲ ಉದ್ದೇಶ ಕಣ್ಮರೆಯಾಗಿ ಅದರ ಸ್ಥಾನವನ್ನು ಕೇವಲ ನವೀಣಾಚರಣೆಗಳು ಪಡೆದುಕೊಂಡಿದೆ. ಮಾತ್ರವಲ್ಲ ಅದರೊಂದಿಗೆ ಇನ್ನೂ ಅನೇಕ ವಿಷಯಗಳು ಸೇರಿಕೊಂಡಿವೆ. ಆದ್ದರಿಂದ, ಅವುಗಳನ್ನು ಕಡ್ಡಾಯ ಪದ್ಧತಿಗಳೆಂದು ಪರಿಗಣಿಸಬಾರದು, ಇದರ ಬದಲು ಇದು ಮದುವೆಯ ಸಂಭಂಧಗಳನ್ನು ಕಾನೂನುಬದ್ಧಗೊಳಿಸಲು ಅಗತ್ಯವಾದ ವಿಷಯವೆಂದು ಅರಿಯಬೇಕು. ಸೃಷ್ಟಿಗಳಿಗೆ ಪ್ರಯೋಜನಕಾರಿಯಾಗುವ ವಿಷಯಗಳ ಮೇಲೆ ಶರೀಅತ್ ಎಂದು ತಡೆಯಾಗುವುದಿಲ್ಲ ಎಂಬುದನ್ನು ನೆನಪಿಡಿ, ಏಕೆಂದರೆ ಸೃಷ್ಟಿಗಳಿಗೆ ಪ್ರಯೋಜನ ನೀಡುವುದು ಶರಿಯತ್ತಿನ ಮೂಲ ಉದ್ದೇಶವಾಗಿದೆ. ಸಿಡಿಮದ್ದುಗಳು ಹಾಗೂ ಮನರಂಜನಾ ಕಾರ್ಯಕ್ರಮ ಮುಂತಾದವುಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಏಕೆಂದರೆ ಇದರಿಂದ ಸೃಷ್ಟಿಗಳಿಗೆ ಹಾನಿಯೇ ಹೊರತು ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ."

**(ಮಲ್‌ಫೂಝಾತ್ ಸಂಪುಟ–2, ಪುಟ–310)**

## ಸದರ್ ಅಂಜುಮನ್ ಅಹ್ಮದಿಯಾ, ಅಂಜುಮನ್ ತಹ್ರೀಕೆ ಜದೀದ್, ಅಂಜುಮನ್ ವಖ್ಫೆ ಜದೀದ್ ಖಾದಿಯಾನ್ ಮತ್ತು ಉಪಸಂಸ್ಥೆಗಳಲ್ಲಿ ಸೇವೆಸಲ್ಲಿಸಲು ಆಸಕ್ತಿ ಹೊಂದಿದವರು ಗಮನಿಸಬೇಕು.

ಮಾಲಿ (ತೋಟಗಾರ) / ಕೇರ್‌ಟೇಕರ್ / ಕಾವಲುಗಾರ / ಅಡುಗೆಗಾರ / ರೊಟ್ಟಿ ಮಾಡುವವ /ಮಸ್ಜಿದ್ ಸೇವಕಗೆ ನಾಲ್ಕನೇ ಗ್ರೇಡ್‌ಗೆ (ಶರತ್ತುಗಳು) ಅವಶ್ಯಕತೆಗಳು

### ಷರತ್ತುಗಳು

(1) ಅಭ್ಯರ್ಥಿಯ ವಯಸ್ಸು 40 ವರ್ಷಗಳಿಗಿಂತ ಹೆಚ್ಚಿರಬೇಕು ಮತ್ತು 18 ವರ್ಷಗಳಿಗಿಂತ ಕಡಿಮೆಯಿರಬಾರದು.

(2) ಅಭ್ಯರ್ಥಿಯ ಯಾವುದೇ ಶೈಕ್ಷಣಿಕ ಅವಶ್ಯಕತೆಗಳಿಲ್ಲ.

(3) ಈ ಪ್ರಕಟಣೆಯ ನಂತರ 2 ತಿಂಗಳೊಳಗೆ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದು.

(4) ಕಾರ್ಮಿಕರ ನೇಮಕಾತಿಗಾಗಿ ಕೇಂದ್ರ ಸಮಿತಿಯ ಸಂದರ್ಶನದಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳನ್ನು ಮಾತ್ರ ಸೇವೆಗೆ ತೆಗೆದುಕೊಳ್ಳಲಾಗುತ್ತದೆ.

(5) ಸಂದರ್ಶನದಲ್ಲಿ ಯಶಸ್ವಿಯಾದರೆ, ಅಭ್ಯರ್ಥಿಯು ನೂರ್ ಆಸ್ಪತ್ರೆ ಖಾದಿಯಾನ್‌ನಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಮತ್ತು ಯಾವ ಅಭ್ಯರ್ಥಿಗಳನ್ನು ನೂರ್ ಆಸ್ಪತ್ರೆಯ ವೈದ್ಯಕೀಯ ಮಂಡಳಿಯ ವರದಿಯ ಪ್ರಕಾರ ಆರೋಗ್ಯಕರ ಮತ್ತು ಸದೃಢರಾಗಿರುವವರು ಅರ್ಹರಾಗಿರುತ್ತಾರೆ ಅಂತಹ ಅಭ್ಯರ್ಥಿಗೆ ಮಾತ್ರ ಸೇವೆಗೆ ಪರಿಗಣಿಸಲಾಗುತ್ತದೆ.

(6) ಆಯ್ಕೆಯ ಸಂದರ್ಭದಲ್ಲಿ, ಅಭ್ಯರ್ಥಿಯು ಅವನ/ಅವಳ ಸ್ವಂತ ವಸತಿಯ ವ್ಯವಸ್ಥೆ ಮಾಡಬೇಕಾಗುತ್ತದೆ.

(7) ಖಾದಿಯಾನ್‌ಗೆ ಪ್ರಯಾಣದ ವೆಚ್ಚಗಳು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.

**ಗಮನಿಸಿ: ಸಂದರ್ಶನದ ದಿನಾಂಕವನ್ನು ನಂತರ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ

ಖಾದಿಯಾನ್–143516

ಮೊಬೈಲ್: 9682627592, 9888232530.

ಕಛೇರಿ: 01872–501130 E-Mail : diwan@qadian.in

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರೀಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು."

(ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

MUSLIM TELEVISION AHMADIYYA INTERNATIONAL
www.mta.tv

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.06, Thursday, 23, 30 January 2025, Issue No. 04-05

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರ್‌ತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-03ರ ಉಳಿದ ಭಾಗ ಮುಂದುವರಿಸಲಾಗಿದೆ)*

ಹುಝೂರ್ ಅನ್ವರ್(ಅಬಿಅ) ಹೇಳಿದರು: ಅತ್ತೆ ಸೊಸೆಯ ಕುರಿತು ಬಹಳಷ್ಟು ಕೇಳಿಬರುತ್ತದೆ. ಸಾಧಾರಣವಾಗಿ ಅತ್ತೆ ಸೊಸೆಗಳ ವ್ಯವಹಾರ ಪರಿಪೂರ್ಣ ರೀತಿಯಲ್ಲಿ ಪ್ರೀತಿದಾಯಕವಿರುವುದಿಲ್ಲ ಎಂಬ ಅಂಶ ಮುಂದೆ ಬರುತ್ತದೆ. ಆದರೆ ಪರಸ್ಪರ ಪ್ರೀತಿಯಿಂದಿರುವ ಕೆಲವು ಉದಾಹರಣೆಗಳು ಇಂದು ಸಹ ಮುಂದಿವೆ. ಆದರೆ ಅತ್ಯುತ್ತಮ ಉದಾಹರಣೆ ನಮಗೆ ಇಸ್ಲಾಮಿನ ಇತಿಹಾಸದಲ್ಲಿ ಹಝ್ರತ್ ಫಾತಿಮ(ರ) ಅವರಿಂದ ಲಭ್ಯವಾಗುತ್ತದೆ. ಹಝ್ರತ್ ಫಾತಿಮಲಾ ಬಿನ್ತ್ ಅಸದ್ ಅವರು ಹಝ್ರತ್ ಅಲಿಯ ತಾಯಿಯಾಗಿದ್ದರು. ಹಝ್ರತ್ ಅಲಿಯ ತಾಯಿಯ ಹೆಸರೂ ಫಾತಿಮಾ ಎಂದಾಗಿತ್ತು. ಹಝ್ರತ್ ಫಾತಿಮಾ(ರ) ರಸೂಲುಲ್ಲಾಹ್(ಸ) ರವರ ಪುತ್ರಿಯ ಅತ್ತೆಯಾಗಿದ್ದರು. ಹಝ್ರತ್ ಫಾತಿಮಾ (ರ) ಅವರಿಗೆ ತನ್ನ ನಿಜವಾದ ತಾಯಿಯಂತೆ ತಿಳಿದುಕೊಂಡಿದ್ದರು. ಮತ್ತು ಅವರ ಸೇವೆ ಮಾಡುತ್ತಿದ್ದರು. ಹಝ್ರತ್ ಫಾತಿಮಾ ಮನೆ ಕೆಲಸಗಳನ್ನೆಲ್ಲಾ ಪೂರೈಸಿದ ನಂತರ ಅವರ ಅಗತ್ಯಗಳ ಬಗ್ಗೆ ಗಮನಹರಿಸುತ್ತಿದದ್ರು. ಅವರಿಗೆ ಹೆಚ್ಚಿನ ಕೆಲಸ ಮಾಡಲು ಹಚ್ಚುತ್ತಿರಲಿಲ್ಲ. ಅವರಿಗೆ ಆದಷ್ಟು ವಿಶ್ರಾಂತಿ ಕೊಡಲು ಪ್ರಯತ್ನ ಮಾಡುತ್ತಿದ್ದರು. ಅವರ ಬಟ್ಟೆ ಸ್ವಚ್ಛ ಮಾಡಿಕೊಡುತ್ತಿದ್ದರು. ಅವರಿಗೆ ಊಟ ಮಾಡಿಸುತ್ತಿದ್ದರು. ಅವರ ಹಾಸಿಗೆ ಸ್ವಚ್ಛ ಮಾಡಿ ಹಾಕಿಕೊಡುತ್ತಿದ್ದರು. ಅವರಿಗೆ ಇರುವ ಕಾರ್ಯಗಳಲ್ಲಿಯೂ ಸಹಾಯ ಮಾಡುತ್ತಿದ್ದರು. ಹಝ್ರತ್ ಅಲಿ(ರ) ಅವರ ತಾಯಿ ಸ್ವತಃ ಹೇಳುತ್ತಾರೆ. ಹಝ್ರತ್ ಫಾತಿಮಾ(ರ) ನನ್ನ ಸೇವೆ ಮಾಡಿದಷ್ಟು ಯಾವ ಸೊಸೆಯೂ ಮಾಡಲಿಕ್ಕಿರಲಿಲ್ಲ. ಮತ್ತು ಮುಂದುವರೆದು ಹೇಳುತ್ತಾರೆ. ರಸೂಲುಲ್ಲಾಹ್(ಸ) ರವರ ಪುತ್ರಿ ನನ್ನ ಸೊಸೆಯಾಗಿದ್ದಾರೆ. ಆಕೆ ತುಂಬಾ ಸೇವೆ ಮಾಡುವವಳು ಮತ್ತು ನನಗೆ ತನ್ನ ಸ್ವಂತ ತಾಯಿಯಂತೆ ನೋಡಿಕೊಳ್ಳುತ್ತಾಳೆ. ಇದಾಗಿದೆ ಅತ್ತೆ ಸೊಸೆಗಳ ಸೇವಾಭಾವನೆ.

ಪುರುಷರ ಕೆಲಸವೇನೆಂದರೆ ಹೊರಗೆ ಹೋಗಬೇಕು, ಸಂಪಾದನೆ ಮಾಡಬೇಕು ಮತ್ತು ಹೊರಗಿನ ವ್ಯವಹಾರಗಳನ್ನು ನೋಡಿಕೊಳ್ಳಬೇಕು. ಇಲ್ಲಿ ಕೆಲ ಸಂದರ್ಭಗಳಲ್ಲಿ ಪ್ರಶ್ನೆ ಏಳುತ್ತದೆ. ನಾವು ಎರಡು ಗಂಟೆ ಕೆಲಸ ನಿರ್ವಹಿಸಿದರೆ ಪುರುಷರು ಸಹ 4 ಗಂಟೆ ಕೆಲಸ ಮಾಡಬೇಕು. ಎರಡು ಗಂಟೆ ಸ್ತ್ರೀಯು ಕೆಲಸ ಮಾಡಬೇಕು. ಹೀಗೆಲ್ಲ ಮಾಡುವುದು ತಪ್ಪು. ಪ್ರತಿಯೊಬ್ಬರಿಗೆ ತಮ್ಮ ಹೊಣೆಗಾರಿಕೆಯ ಬಗ್ಗೆ ಅರಿವು ಇರಬೇಕು. ಆಗ ಮಾತ್ರ ಮನೆಗಳಲ್ಲಿ ಶಾಂತಿ ನೆಲೆನಿಲ್ಲಲು ಸಾಧ್ಯ. ಪರಸ್ಪರ ವ್ಯವಹಾರ ಚೆನ್ನಾಗಿರಬೇಕು. ಮಕ್ಕಳ ತರಬೇತಿ ಚೆಂದ ರೀತಿಯಲ್ಲಿ ಆಗಬೇಕು. ಮುಸ್ಲಿಂ ಮಹಿಳೆಯರ ಸಾಹಸ ಶೌರ್ಯಗಳ ಹಲವು ಘಟನೆಗಳು ಸಹ ಇತಿಹಾಸದಲ್ಲಿ ಕಾಣಸಿಗುತ್ತದೆ.

ಹುಝೂರ್ ಅನ್ವರ್(ಅಬಿಅ), ಹಝ್ರತ್ ಖೌಲ ಬಿನ್ತ್ ಅಝೂರ್, ಹಝ್ರತ್ ಹಿಂದ್ ಬಿನ್ತ್ ಉಮ್ರೋ, ಮತ್ತು ಹಝ್ರತ್ ಉಮ್ಮೇ ಅಮ್ಮಾರ್, ಅವರುಗಳ ಸಾಹಸ ಶೌರ್ಯಗಳ ಘಟನೆಗಳನ್ನು ವಿವರಿಸಿದರು.

ಕೊನೆಯದಾಗಿ ಹುಝೂರ್ ಅನ್ವರ್(ಅಬಿಅ) ಹೇಳಿದರು: ಹಝ್ರತ್ ಮುಸ್ಲಿಹ್ ಮೌಊದ್(ರ) ಆ ಮಹಿಳೆಯರ ಇತಿಹಾಸವನ್ನು ವಿವರಿಸುತ್ತಾ ತನ್ನ ಖುತುಬದಲ್ಲಿ ಹೇಳಿದರು. ಓರ್ವ ಮಹಿಳೆ ರಸೂಲುಲ್ಲಾಹ್ (ಸ) ರವರ ಸೇವೆಯಲ್ಲಿ ಹಾಜರಾದಳು ಮತ್ತು ಹೇಳಿದಳು. ಪುರುಷರು ನಮಗಿಂತ ಹೆಚ್ಚು ಅಲ್ಲಾಹನ ಸಾನಿಧ್ಯಕ್ಕೆ ಅರ್ಹರೇ, ಏಕೆಂದರೆ ಅವರು ಜಿಹಾದ್‌ನಲ್ಲಿ ಭಾಗವಹಿಸುತ್ತಾರೆ. ನಾವು ಭಾಗವಹಿಸುವುದಿಲ್ಲ. ನಾವು ಸಹ ಜಿಹಾದ್‌ನಲ್ಲಿ ಭಾಗವಹಿಸಬಹುದಲ್ಲ. ಅವರು(ಸ) ಹೇಳಿದರು. ಸರಿ, ಅಂದಹಾಗೆ ಆ ಮಹಿಳೆ ಒಂದು ಯುದ್ಧದಲ್ಲಿ ಭಾಗಿಯಾದಳು. ಯುದ್ಧ ವಿಜಯದ ನಂತರ ಅದರಲ್ಲಿ ಲಭ್ಯವಾದ ಸಂಪತ್ತುಗಳ ವಿತರಣ ಸಂದರ್ಭದಲ್ಲಿ ಅವಳಿಗೂ ಒಂದು ಭಾಗ ನೀಡಿದರು. ಕೆಲವು ಸಹಾಬರು ಕೇಳಿದರು, ಆಕೆಗೆ ಭಾಗ ಕೊಡುವ ಅವಶ್ಯಕತೆ ಏನಿದೆ? ನಬಿ(ಸ) ರು ಹೇಳಿದರು. ಆಕೆಗೆ ಭಾಗ ಕೊಡುವ ಅವಶ್ಯಕತೆ ಏನಿದೆ? ನಬಿ(ಸ) ರು ಹೇಳಿದರು. ಆಕೆಗೂ ಪಾಲು ನೀಡಲಾಗುವುದು. ಅಂದಹಾಗೆ ಆ ಮಹಿಳೆಗೂ ಒಂದು ಭಾಗ ನೀಡಲಾಯಿತು. ಅಂದಿನಿಂದ ಈ ನಡವಳಿಕೆ ಜಾರಿಯಾಯಿತು. ಪುರುಷರು ಜಿಹಾದ್‌ನಲ್ಲಿ ಹೋಗುವಾಗ, ಗಾಯಾಳುಗಳಿಗೆ ಪಟ್ಟಿ ಮಾಡಲು ಮಹಿಳೆಯರು ಸಹ ಜೊತೆಯಲ್ಲಿ ಹೋಗುತ್ತಿದ್ದರು. ರಸೂಲುಲ್ಲಾಹ್(ಸ) ರವರ ನಿಧನದ ನಂತರ ಯುದ್ಧಗಳಲ್ಲಿ ಮಹಿಳೆಯರು ಸಹ ಭಾಗವಹಿಸುತ್ತಿದ್ದರು. ಕೆಲವು ಯುದ್ಧಗಳಲ್ಲಿ ಮಹಿಳೆಯರು ನೇತೃತ್ವ ವಹಿಸಿಕೊಂಡಿದ್ದಾರೆ. ಹುಝೂರ್ ಅನ್ವರ್(ಅಬಿಅ) ಹಝ್ರತ್ ಆಯಿಶಾ(ರ) ರವರು ಉದಾಹರಣೆ ನೀಡಿದರು, ಅವರು ಯುದ್ಧದ ನೇತೃತ್ವ ವಹಿಸಿದ್ದರು. ಆ ಸಂದರ್ಭ ಸರಿಯಾಗಿತ್ತೋ, ತಪ್ಪೋ, ಆ ವಿಷಯ ಬೇರೆ, ಅಂತೂ ಅವರಿಗೆ ಯುದ್ಧಗಳ ಬಗ್ಗೆ ಅನುಭವವಿತ್ತು. ಅವರು ನೇತೃತ್ವ ವಹಿಸಿದ್ದರು. ನಂತರ ಅವರಿಗೆ ಜ್ಞಾನೋದಯವಾಯಿತು. ಆ ಸಂದರ್ಭ ಸರಿಯಾಗಿರಲಿಲ್ಲ. ಆದ್ದರಿಂದ ಅವರು(ರ) ಮೈತ್ರಿಗೋಸ್ಕರ ಧ್ವಜ ಎತ್ತಿಹಿಡಿದರು.

ಹುಝೂರ್ ಅನ್ವರ್(ಅಬಿಅ) ಹೇಳಿದರು: ಹೇಳುವ ತಾತ್ಪರ್ಯವೇನೆಂದರೆ ಆ ಕಾಲದಲ್ಲಿ ಮಹಿಳೆಯರು ಯುದ್ಧಾಸ್ತ್ರಗಳ ಬಗ್ಗೆಯೂ ತಿಳಿದಿದ್ದರು. ಎಲ್ಲಾ ಕಾರ್ಯಗಳನ್ನು ಕಲಿಯುತ್ತಿದ್ದರು. ಅವರಲ್ಲಿ ಸಾಹಸವಿತ್ತು. ಮನೆಗಳಲ್ಲಿ ಖೈದಿಯಂತೆ ಕುಳಿತುಕೊಳ್ಳುತ್ತಿರಲಿಲ್ಲ. ಈ ಕಾಲಘಟ್ಟದ ಯುದ್ಧ ಲೇಖನಿಯ ಯುದ್ಧವಾಗಿರುತ್ತದೆ. ಸಾಹಿತ್ಯ ವಿತರಣೆಯ ಯುದ್ಧವಾಗಿರುತ್ತದೆ. ಪ್ರಚಾರದ ಜಿಹಾದ್ ಇದೆ. ಆದ್ದರಿಂದ ಮಹಿಳೆಯರ ಕರ್ತವ್ಯವಾಗಿದೆ. ಪ್ರಚಾರದಲ್ಲಿ ತುಂಬು ರೀತಿಯಲ್ಲಿ ಭಾಗವಹಿಸಬೇಕು ಮತ್ತು ಈ ಆಧ್ಯಾತ್ಮಿಕ ಆಯುಧಗಳಿಂದ ಸಿದ್ಧವಾಗಿರಬೇಕು. ಪವಿತ್ರ ಖುರ್‌ಆನ್‌ನ ಜ್ಞಾನ ಪಡೆಯಬೇಕು ಧರ್ಮಜ್ಞಾನ ಪಡೆಯಬೇಕು. ಹಝ್ರತ್ ಮಸೀಹ್ ಮೌಊದ್(ಅ) ರವರ ಗ್ರಂಥಗಳಿಂದ ಜ್ಞಾನ ಪಡೆಯಬೇಕು. ಹದೀಸುಗಳ ಜ್ಞಾನ ಪಡೆಯಬೇಕು. ಮತ್ತು ತಮ್ಮ ಉನ್ನತ ನೈತಿಕ ಮೌಲ್ಯಗಳನ್ನು ಇಸ್ಲಾಮಿನ ಶಿಕ್ಷಣದಂತೆ ಎತ್ತಿ ಹಿಡಿಯಬೇಕು. ಆಗ ಮಾತ್ರ ಇಸ್ಲಾಮಿನ ಸೇವೆ ಮಾಡಲು ಸಾಧ್ಯ. ಆದ್ದರಿಂದ ಈ ಕುರಿತು ಆತ್ಮಾವಲೋಕನ ಮಾಡಿಕೊಳ್ಳಿ. ಕೇವಲ ಲೌಕಿಕತೆಯಲ್ಲಿ ಮುಳುಗಿರಬಾರದು. ನಾವು ತಮ್ಮ ಪ್ರತಿಜ್ಞೆಗಳನ್ನು ಪಾಲಿಸಬೇಕಾಗಿದೆ. ಸದಾ ನೆನಪಿರಲಿ. ಯಾವುದೇ ಒಂದು ದೊಡ್ಡ ಸಾಧನೆ ಮಾಡಹೊರಟರೆ ತ್ಯಾಗ ಮಾಡಬೇಕಾಗುತ್ತದೆ. ಸಣ್ಣ ಸಣ್ಣ ಮಾತುಗಳಲ್ಲಿ, ನಾವು ಇದೇಕೆ ಮಾಡಬೇಕು, ಅದೇಕೆ ಮಾಡಬೇಕು ಎನ್ನಬಾರದು. ತ್ಯಾಗ ಮಾಡಬೇಕು, ತಮ್ಮ ಲಜ್ಜೆಯ ಬಗ್ಗೆ ಗಮನವಿರಬೇಕು. ವೇಷಭೂಷಣದ ಬಗ್ಗೆ ಗಮನ ಇರಬೇಕು. ಧರ್ಮದ ವಿಷಯಗಳನ್ನು ತಿಳಿದಿರಬೇಕು. ತಮ್ಮ ಪ್ರತಿಜ್ಞೆಗಳನ್ನು ಪಾಲಿಸುವ ಪ್ರಯತ್ನ ಮಾಡಬೇಕು. ಸದಾ ನೆನಪಿರಲಿ. ಯಾವುದೇ ಅಸಮಂಜಸ ಸ್ಥಿತಿಯಲ್ಲಿರಬಾರದು. ನಮ್ಮಲ್ಲಿ ಅರ್ಹತೆಯಿಲ್ಲ ಎಂಬ ಕೀಳುಭಾವನೆ ಇರಬಾರದು, ಜನರು ಏನು ಹೇಳಬಹುದು ಎಂಬ ಅಳುಕು ಇರಬಾರದು, ಜನರಿಗೆ ನಮ್ಮನ್ನು ಹಿಂಬಾಲಿಸುವಂತೆ ಮಾಡಬೇಕೇ ಹೊರತು ಅವರ ಹಿಂದೆ ಹೋಗಬಾರದು. ಇನ್‌ಶಾ ಅಲ್ಲಾಹ್ ಈ ದೇಶದಲ್ಲ ತಮ್ಮ ಮಾದರಿಗಳ ಮೂಲಕ ಇಸ್ಲಾಂ ಅಹ್ಮದಿಅತ್ತಿನ ಧ್ವಜ ಹಾರ್‍ಯಸಬೇಕಾಗಿದೆ. ಅಲ್ಲಾಹನು ನಿಮಗೆಲ್ಲರಿಗೂ ಈ ಭಾಗ್ಯ ದಯಪಾಲಿಸಲಿ. ಈಗ ದುಆ ಮಾಡೋಣ.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.